# ಅಧ್ಯಾಪಕ ಪಠ್ಯ

## TEACHER TEXT

## ತರಗತಿ IX

## ಕನ್ನಡ I

## ಘಟಕ 2 : ನಡೆನುಡಿ

**ಘಟಕ ನಡೆನುಡಿ** **ತರಗತಿ 9 – ಕನ್ನಡ 1**

| ಪಾಠದ ಹೆಸರು | ಆಶಯ/ತಿಳುವಳಿಕೆ/ಮನೋಭಾವ | ಪ್ರಕ್ರಿಯೆ | ಪೂರಕ ಸಾಮಗ್ರಿ | ಮೌಲ್ಯನಿರ್ಣಯ |
|---|---|---|---|---|
| 1.<br><br>2. ಮಲೆಗಳಲ್ಲಿ ಮರೆಯಾದ ಅಂಚೆಯಣ್ಣ (ಅಂಕಣ ಬರಹ)<br>–ಲೇ: ಜಯಂತ ಕಾಯ್ಕಿಣಿ | • ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಅಂಕಣ ಬರಹವೂ ಒಂದು<br>• ಅಂಕಣ ಬರಹಗಳಲ್ಲಿ ಸಾಹಿತ್ಯಕೃತಿಗಳ ವಿಮರ್ಶೆಯೂ ಇರುತ್ತದೆ<br>• ಮಾಡುವ ವೃತ್ತಿ ಯಾವುದೇ ಇರಲಿ, ಅದರ ಬಗ್ಗೆ ಗೌರವ, ಪ್ರೀತಿ, ನಿಷ್ಠೆ ಇರಬೇಕು<br>• ಕಾಯಕ ನಿಷ್ಠೆಯ ಮಹತ್ವವನ್ನು ಸಾರುವ ಹಲವಾರು ಕೃತಿಗಳು ಕನ್ನಡ ಸಾಹಿತ್ಯದಲ್ಲಿ ಬಂದಿದೆ | • ಉತ್ತರಿಸುವುದು<br>• ಶೀರ್ಷಿಕೆ ಬರೆಯುವುದು<br>• ಪಾತ್ರ ಚಿತ್ರಣ<br>• ಅಭಿಪ್ರಾಯ ಟಿಪ್ಪಣಿ<br>• ಲೇಖನ ತಯಾರಿ<br>• ವಿಶ್ಲೇಷಣಾ ಟಿಪ್ಪಣಿ<br>• ಸಂಧಿ ಗುರುತಿಸುವುದು<br>• ಚಿತ್ರ ರಚಿಸುವುದು | **'The postman in mountains' - Cinema - (.https://youtu.be/SMZCmlwvMGE)** | • ಶೀರ್ಷಿಕೆ<br>• ಪಾತ್ರ ಚಿತ್ರಣ<br>• ಲೇಖನ |

## ಘಟಕ – 2

# ನಡೆನುಡಿ

### 1. ಮಂಕುತಿಮ್ಮನ ಕಗ್ಗ

- ಎಳೆಯ ತರುವು ದಿನದಿನವು....

– ಈ ಮುಕ್ತಕದ ಆಶಯ

ಎಳೆಯ ಗಿಡವು ದಿನದಿನವೂ ಬೆಳೆದು ಹೊಸ ಚಿಗುರನ್ನು ಪಡೆದು ನಳನಳಿಸುತ್ತದೆ. ತಿಳಿಯಾದ ನೀರು ಭೂಮಿಯಡಿಯಿಂದ ಒರತೆಯಾಗಿ ಹೊರ ಹೊಮ್ಮುತ್ತದೆ. ಅದೇ ರೀತಿ ಎಳೆಯ ಮಕ್ಕಳಿಗೆ ಲಭಿಸುವ ವಿವಿಧ ಅನುಭವಗಳು ಜ್ಞಾನವಾಗಿ ಹೊರಹೊಮ್ಮುವುದು. ಭೂಮಿಯಲ್ಲಿ ನಡೆಯುವ ಈ ಚಮತ್ಕಾರವನ್ನು ನೋಡುವುದೇ ಸೊಗಸು ಎಂದು ಕವಿ ಡಿ.ವಿ.ಜಿ. ಹೇಳುತ್ತಾರೆ.

# 2. ಮಲೆಗಳಲ್ಲಿ ಮರೆಯಾದ ಅಂಚೆಯಣ್ಣ

## ಓದುವುದು

ಪಾಠವನ್ನು ಸರಣಿ ಓದಿನ ಮೂಲಕ ವಿದ್ಯಾರ್ಥಿಗಳು ಬಾಯ್ದೆರೆಯಾಗಿ ಓದಲಿ. ಬಳಿಕ ಆಶಯಗ್ರಹಣಕ್ಕಾಗಿ ಮತ್ತೊಮ್ಮೆ ಪ್ರತಿಯೊಬ್ಬರೂ ಮೌನವಾಗಿ ಓದಲಿ. ಆಶಯಗ್ರಹಣ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಂಡು ತಮ್ಮ ಪುಸ್ತಕದಲ್ಲಿ ಬರೆದುಕೊಳ್ಳಲಿ. ಆ ಬಳಿಕ ಅಧ್ಯಾಪಕರು ಸೂಚಿಸಿದ ವಿದ್ಯಾರ್ಥಿ ತರಗತಿಯಲ್ಲಿ ಮಂಡಿಸಲಿ. ಆ ಸಂದರ್ಭದಲ್ಲಿ ತರಗತಿ ಚರ್ಚೆ ನಡೆದು ಅಗತ್ಯದ ಬದಲಾವಣೆಗಳನ್ನು ಮಾಡಿಕೊಂಡು ಆಶಯವನ್ನು ಸ್ಪಷ್ಟಮಾಡಿಕೊಳ್ಳುವುದು.

## ಶೀರ್ಷಿಕೆ ಬರೆಯಿರಿ

ತರಗತಿಯ ಪ್ರತಿಯೊಂದು ಮಗುವೂ ತನಗೆ ಇಷ್ಟವಾದ ಶೀರ್ಷಿಕೆಯನ್ನು ಬರೆಯಲು ಹೇಳುವುದು. ಶೀರ್ಷಿಕೆ ಬರೆಯುವ ಮೊದಲು 'ಶೀರ್ಷಿಕೆ ಹೇಗಿರಬೇಕು?' ಎಂಬುದರ ಬಗ್ಗೆ ತರಗತಿ ಚರ್ಚೆ ನಡೆಸುವುದು. ನಿರ್ದಿಷ್ಟ ಸಮಯದ ಬಳಿಕ ಪ್ರತಿಯೊಬ್ಬ ವಿದ್ಯಾರ್ಥಿಯಲ್ಲೂ ಶೀರ್ಷಿಕೆಯನ್ನು ಓದಿಸಿ ಆ ಶೀರ್ಷಿಕೆ ನೀಡಿದುದಕ್ಕೆ ಕಾರಣವನ್ನು ನೀಡಲು ಹೇಳುವುದು.

ಉದಾ : ಕಸುಬಿನ ಹಸ್ತಾಂತರ

- ಕಾಯಕ ನಿಷ್ಠೆ
- 
- 

'ಕಸುಬಿನ ಹಸ್ತಾಂತರ' ಎಂಬ ಶೀರ್ಷಿಕೆ ಈ ಪಾಠಭಾಗಕ್ಕೆ ಒಪ್ಪುತ್ತದೆ. ಯಾಕೆಂದರೆ, ಇಲ್ಲಿ ಅಂಚೆಯಣ್ಣ ತನಗೆ ವಯಸ್ಸಾದಾಗ ತನ್ನ ವೃತ್ತಿಯನ್ನು ತನ್ನ ಹದಿಹರೆಯದ ಮಗನಿಗೆ ಹಸ್ತಾಂತರಿಸುತ್ತಾನೆ.

## ಅಭಿಪ್ರಾಯ ಟಿಪ್ಪಣಿ ಬರೆಯುವುದು

ವಿದ್ಯಾರ್ಥಿಗಳು ತಮ್ಮ ಅನಿಸಿಕೆಯನ್ನು ಬಾಯ್ದೆರೆಯಾಗಿ ಹೇಳಲು ಅವಕಾಶ ನೀಡುವುದು. ಬಳಿಕ ಬರೆಯಲಿ.

**ಅಭಿಪ್ರಾಯ ಟಿಪ್ಪಣಿ ಹೀಗೂ ಇರಬಹುದು**

ಅಂಚೆಯ ಅಣ್ಣನು ಊರಿನ ಒಂಟಿ ಕುರುಡಿ ಅಜ್ಜಿಗೆ ಆಕೆಯ ಮಗನು ಕಳುಹಿಸಿದ ಮನಿಯಾರ್ಡರು ನೀಡಿದಾಗ, ಆಕೆ ಮಗ ಏನು ಬರೆದಿದ್ದಾನೆ? ಎಂದು ಕುತೂಹಲದಿಂದ ಕೇಳುತ್ತಾಳೆ. ಕಣ್ಣು ಕಾಣದೆ ಒಂಟಿಯಾಗಿ ಬದುಕುತ್ತಿದ್ದ ಆ ಜೀವ ಹಣಕ್ಕಿಂತಲೂ ಮಗನ ಕಾಳಜಿ, ಸಾಂತ್ವನದ ನುಡಿಯನ್ನು ಬಯಸುತ್ತಿದೆ ಎಂಬುದನ್ನು ಅರ್ಥೈಸಿಕೊಂಡ ಅಂಚೆಯಣ್ಣ ಸುಳ್ಳು ಸುಳ್ಳೇ ಕಾಗದದಲ್ಲಿ ಇದೆಯೆಂಬಂತೆ "ಪ್ರೀತಿಯ ಅಮ್ಮ, ನೀನು ಹೇಗಿದ್ದೀ ?

ಈ ಮಳೆಗಾಲದ ನಂತರ ಖಂಡಿತ ಬರುತ್ತೇನೆ. ನಿನ್ನ ಕಾಳಜಿ ತಗೋ, ಸರಿಯಾಗಿ ತಿನ್ನು. ಬೆಟ್ಟದಲ್ಲಿ ಹಣ್ಣುಗಳನ್ನು ಆರಿಸಲು ಜಾಸ್ತಿ ಅಲೆಯಬೇಡ" ಎಂದು ಹೇಳುತ್ತಾನೆ. ಕಣ್ಣೇ ಕಾಣದ ಆ ತಾಯಿ ಅದನ್ನು ನಂಬುತ್ತಾ ಆಲಿಸುತ್ತಾಳೆ.

ಇಲ್ಲಿ, ಅಂಚೆಯಣ್ಣ ಯಾವುದೇ ಸ್ವಾರ್ಥ ಮನೋಭಾವದಿಂದ ಸುಳ್ಳು ಹೇಳಿಲ್ಲ. ಅಲ್ಲದೆ ಆ ಸುಳ್ಳಿನಿಂದ ಯಾರಿಗೂ ತೊಂದರೆಯೂ ಆಗುವುದಿಲ್ಲ. ಒಂಟಿಯಾದ ಆ ತಾಯಿಗೆ ತನ್ನ ಮಗನ ಮೇಲಿನ ಪ್ರೀತಿ, ವಿಶ್ವಾಸ ಹೆಚ್ಚುತ್ತದೆ. ಮಗನು ದೂರದಲ್ಲಿದ್ದರೂ ತನ್ನ ಬಗ್ಗೆ ಕಾಳಜಿ ತೋರುತ್ತಿದ್ದಾನೆ ಎಂಬ ಆ ನಂಬಿಕೆಯೇ ಆ ತಾಯಿಗೆ ಬದುಕಲು ಪ್ರೇರಣೆಯಾಗಬಹುದು. ಅಲ್ಲದೆ ಅಂಚೆಯಣ್ಣ ನಿಜವನ್ನೇ ಹೇಳಿದ್ದರೆ, ಮಗ ಕರ್ತವ್ಯವೆಂಬಂತೆ ಹಣವನ್ನು ಕಳುಹಿಸಿದ್ದರೂ ಈಗ ಉಂಟಾದ ಸಂತೋಷ ಲಭಿಸುತ್ತಿರಲಿಲ್ಲ. ಆದ್ದರಿಂದ ಆತ ಸುಳ್ಳು ಸುಳ್ಳೇ ಪತ್ರವನ್ನು ಓದಿ ಹೇಳಿದ್ದು ಸರಿ ಎಂಬುದು ನನ್ನ ಅಭಿಪ್ರಾಯ.

## ◘ ವಿಶ್ಲೇಷಣಾ ಟಿಪ್ಪಣಿ

ಪಾಠದಲ್ಲಿ ಬಂದಿರುವ ಕಥೆಯ ಪ್ರಧಾನ ಘಟನೆಗಳನ್ನು ವಿದ್ಯಾರ್ಥಿಗಳು ಅನುಕ್ರಮವಾಗಿ ಹೇಳಲಿ. ಬಳಿಕ ಅದರಲ್ಲಿ ತಮಗಿಷ್ಟವಾದ ಸನ್ನಿವೇಶವನ್ನು ಹೇಳಿ ಅದಕ್ಕೆ ಕಾರಣವನ್ನು ನೀಡಲು ಸೂಚಿಸುವುದು. ಬಳಿಕ ವಿದ್ಯಾರ್ಥಿಗಳನ್ನು ಗುಂಪು ಮಾಡಿ ಚರ್ಚಿಸಿ ವಿಶ್ಲೇಷಣಾ ಟಿಪ್ಪಣಿಯನ್ನು ಬರೆದು ತರಗತಿಯಲ್ಲಿ ಗುಂಪಿನಿಂದ ಒಬ್ಬರಂತೆ ಮಂಡಿಸಲು ಸೂಚಿಸುವುದು. ತರಗತಿ ಚರ್ಚೆಯ ಮೂಲಕ ಉತ್ತಮಪಡಿಸುವುದು.

ವಿಶ್ಲೇಷಣಾ ಟಿಪ್ಪಣಿ ಹೀಗೂ ಇರಬಹುದು :

' ಮಲೆಗಳಲ್ಲಿ ಮರೆಯಾದ ಅಂಚೆಯಣ್ಣ' – ಇದು 'ಪೋಸ್ಟ್‌ಮೇನ್ ಇನ್ ದಿ ಮೌಂಟೆನ್ಸ್' ಎಂಬ ಚೀನೀ ಚಿತ್ರದ ಕುರಿತಾಗಿ ಲೇಖಕ ಜಯಂತ ಕಾಯ್ಕಿಣಿಯವರು ಬರೆದ ಅಂಕಣ ಬರಹ. ಇದು ಚೀನಾದ ಮಲೆನಾಡಿನ ಪ್ರದೇಶದ ಸರಳ ಜೀವಿಗಳ ಕಥೆ. ಆ ಮಲೆನಾಡು ನಿರ್ಜನ ಕಾಡುಮೇಡುಗಳ ನಡುವೆ ಒಂದೆರಡೇ ಮನೆಗಳಿರುವ ಹಳ್ಳಿ. ಒಂದು ಹಳ್ಳಿಯಿಂದ ಮತ್ತೊಂದು ಹಳ್ಳಿಗೆ ಹೋಗಬೇಕಿದ್ದರೆ ಗುಡ್ಡ, ಕಾಡು, ಹೊಳೆಗಳನ್ನು ದಾಟಿ ಹೋಗಬೇಕು. ಈ ಚಿತ್ರದ ನಾಯಕ 'ಅಂಚೆಯಣ್ಣ' ಈತನಿಗೆ ಈ ಹಳ್ಳಿಗಳಲ್ಲಿ ಒಂದು 'ರೂಟ'ನ ಡ್ಯೂಟಿ ಮುಗಿಸಲು ಒಂದು ವಾರ ಬೇಕು. ಈಗ ಈ ಅಂಚೆಯಣ್ಣ ನಿವೃತ್ತಿಯ ಅಂಚಿನಲ್ಲಿದ್ದಾನೆ. ವಯೋಸಹಜ ಆರೋಗ್ಯ ಸಮಸ್ಯೆಗಳಿವೆ. ಆದರೆ, ಕೆಲಸ ಬಿಟ್ಟರೆ ಜೀವನಕ್ಕೆ ಬೇರೆ ಗತಿಯಿಲ್ಲ ಎಂದು ಚಿಂತಿಸುತ್ತಿರುವಾಗ ಮೇಲಧಿಕಾರಿಗಳಿಂದ ಅವನ ಒಬ್ಬನೇ ಹದಿಹರೆಯದ ಮಗನಿಗೆ ಕೆಲಸವನ್ನು ವರ್ಗಾಯಿಸಲು ಪರವಾನಗಿ ಬರುತ್ತದೆ. ಅಲ್ಲಿಂದ ಮುಂದೆ ಮಗನಿಗೆ ಕೆಲಸವನ್ನು ಪರಿಚಯಿಸುವ, ಕಸುಬಿನ ಹಸ್ತಾಂತರದ ಮನಮುಟ್ಟುವ ಕಥೆ ಮುಂದುವರಿಯುತ್ತದೆ.

ಕಸುಬಿನ ಹಸ್ತಾಂತರದ ಪಯಣ ನಸುಕಿನ ಕಿರಣಗಳಲ್ಲಿ ದಟ್ಟ ಕಾಡು, ಬೆಟ್ಟದ ಕಾಲುದಾರಿಯಲ್ಲಿ ಶುರುವಾಗುತ್ತದೆ. ಅರ್ಧ ದಿನ ನಡೆದು ಮರವೊಂದರ ಬಳಿ ನಿಂತು ವಿಶ್ರಾಂತಿ ಪಡೆಯುವಾಗ ಅಪ್ಪ ಹೇಳುವ ಅಂಚೆ ಚೀಲದ ಮಹತ್ವ "ಜೀವ ಹೋದರೂ ಸರಿ. ಮಳೆಯಿಂದ, ಗಾಳಿಯಿಂದ, ಕಾಡುಪ್ರಾಣಿಗಳಿಂದ, ಹೊಳೆ ನೀರಿನಿಂದ ಇದನ್ನು ಕಾಪಾಡಬೇಕು. ಇದು ಬರೇ ಕಾಗದಗಳಲ್ಲ, ಯಾರ್ಯಾರನ್ನೋ ತಲುಪಬೇಕಾಗಿರುವ ಸ್ವರಗಳು.

ಜೀವ ಹೋದರೂ ಚಿಂತೆಯಿಲ್ಲ" ಎಂದು ಮಗನಲ್ಲಿ ಹೇಳುವಾಗ ಆತನಿಗೆ ಆ ವೃತ್ತಿಯ ಮೇಲಿರುವ ಗೌರವ, ಪ್ರೀತಿ, ನಿಷ್ಠೆಯ ಅರಿವಾಗುತ್ತದೆ. ಈ ಪಯಣ ಮಗನಿಗೆ ಅಪ್ಪನನ್ನು ಹತ್ತಿರದಿಂದ ನೋಡಲು, ಅರ್ಥೈಸಿಕೊಳ್ಳಲು ಸಹಕರಿಸುತ್ತದೆ. ತನ್ನ ತಂದೆ ಅನುಭವಿಸಿದ ಬವಣೆಗಳನ್ನು ಅರಿತುಕೊಂಡ ಮಗ ತನಗರಿವಿಲ್ಲದೆ ಆತನ ಕೈಯ್ಯಲ್ಲಿದ್ದ ಅಂಚೆಯ ಚೀಲವನ್ನು ಇಸಿದುಕೊಂಡು ಬೆನ್ನಿಗೇರಿಸುವುದು ಮಾರ್ಮಿಕವಾಗಿದೆ. ಅದೇ ರೀತಿಯಲ್ಲಿ ಮಗನ ಹೆಗಲೇರಿ ಅಪ್ಪ ಹೊಳೆದಾಟುವ ಸನ್ನಿವೇಶ ತಂದೆ ಮಕ್ಕಳು ಮತ್ತಷ್ಟು ಮಾನಸಿಕವಾಗಿ ದೈಹಿಕವಾಗಿ ಹತ್ತಿರವಾದರು ಎಂಬುದು 'ಕಳೆದ ಹತ್ತು ವರ್ಷಗಳಲ್ಲಿ ಆಡದೇ ಇದ್ದ ತಮ್ಮ ಕುಟುಂಬದ ನೋವಿನ ಎಳೆಗಳನ್ನು ಹಂಚಿಕೊಳ್ಳುತ್ತಾರೆ' ಎಂಬ ಮಾತಿನಲ್ಲಿ ವ್ಯಕ್ತವಾಗುತ್ತದೆ.

ಹೊಳೆದಾಟಿದ ಬಳಿಕ ಸಿಕ್ಕ ಹಳ್ಳಿಯಲ್ಲಿ ಯಾರ್‍ಯಾರ ಮನೆಗೆ ಪತ್ರವನ್ನು ಹೇಗೆ ಕೊಡಬೇಕು ಎಂದು ಮಗನಿಗೆ ಹೇಳಿಕೊಡುತ್ತಾ ಎಲ್ಲರಿಗೂ ಮಗನನ್ನು ಪರಿಚಯಿಸುತ್ತಾ "ಇನ್ನು ಮುಂದೆ ಇವನೇ ಬರುತ್ತಾನೆ. ನಿಮ್ಮ ಮಗನಂತೆ ನೋಡಿಕೊಳ್ಳಿ, ಬಾಯಾರಿಕೆ ನೀರು ಕೊಡಿ" ಎಂಬಲ್ಲಿ ಇದುವರೆಗೆ ಅಂಚೆಯಣ್ಣನ ಪಯಣ ಹೇಗಿತ್ತು ಎಂಬುದನ್ನು ಗುರುತಿಸಬಹುದು. ಮುಂದೆ ಹಳ್ಳಿಯ ಒಂಟಿ ಕುರುಡಿ ಅಜ್ಜಿಗೆ ಸುಳ್ಳು ಸುಳ್ಳೇ ಪತ್ರವನ್ನು ಓದಿ ಹೇಳಿ ಮಗನಲ್ಲೂ "ಆ ತಾಯಿಗೆ ಸಮಾಧಾನವಾಗುವ  ಹಾಗೆ ಹೀಗೆ ಸುಳ್ಳು ಪತ್ರ ಆಗಾಗ ಓದಿ ಹೇಳು" ಎಂಬಲ್ಲಿ ಆತನ ವ್ಯಕ್ತಿತ್ವ ಅನಾವರಣಗೊಳ್ಳುತ್ತದೆ. ಮುಂದಿನ ಹಳ್ಳಿಯವರು ಅಂಚೆಯಣ್ಣನನ್ನು ತಬ್ಬಿ ಬೀಳ್ಕೊಡುವ ಸಂದರ್ಭ ಆತನನ್ನು ಜನರು ಎಷ್ಟು ಪ್ರೀತಿಸುತ್ತಿದ್ದರು ಎಂಬುದನ್ನು ತಿಳಿಸುತ್ತದೆ.

ಮುಂದೆ ನಿರ್ಜನ ಧರ್ಮಶಾಲೆಯಲ್ಲಿ ರಾತ್ರಿ ಕಳೆಯಲೆಂದು ತಂಗುವುದು ಹಾಗೂ ಉಳಿದ ಪತ್ರಗಳನ್ನು ವಿಂಗಡಿಸುವ ಸಂದರ್ಭದಲ್ಲಿ ಬಂದ ಬಿರುಗಾಳಿಗೆ ತರಗೆಲೆಯಂತೆ ಹಾರಿದ ಪತ್ರಗಳನ್ನು ಜೀವದ ಹಂಗು ತೊರೆದು ಪ್ರತಿ ಕಾಗದಗಳನ್ನೂ ಹೆಕ್ಕಿ ಎದೆಗೊತ್ತಿಕೊಂಡು ಮರಳುವ ದೃಶ್ಯ ಅಂಚೆಯಣ್ಣನ ಕಾಯಕ ತತ್ವದ ಪರಮಗಳಿಗೆಯ ದೃಶ್ಯ ಎಂದು ಲೇಖಕರು ಮೆಚ್ಚಿಕೊಳ್ಳುತ್ತಾರೆ. ಈ ಸನ್ನಿವೇಶವನ್ನು ಮಂತ್ರಮುಗ್ಧನಾಗಿ ನೋಡುತ್ತಾ ನಿಂತ ಮಗನಲ್ಲಿ ಒಂದು ಹೊಸ ಜಗದ ಉದಯವಾಗುವುದನ್ನು ಗಮನಿಸಬಹುದು.

ಮರುದಿನದಿಂದ ಅಂಚೆಯ ಚೀಲದೊಂದಿಗೆ ಹೊರಡುವ ಮಗನನ್ನು ಕಳುಹಿಸಿಕೊಡುವ ತಂದೆ-ತಾಯಿ, ಅವನ ಜೊತೆ ಸೇರಿಕೊಳ್ಳುವ ನಾಯಿ ಎಲ್ಲವೂ ಕಸುಬಿನ ಹಸ್ತಾಂತರದ ಪಯಣವನ್ನು ಪ್ರೇಕ್ಷಕರಿಗೆ ತಲುಪಿಸುವಲ್ಲಿ ಯಶಸ್ವಿಯಾಗುತ್ತದೆ.

ಒಟ್ಟಿನಲ್ಲಿ ಈ ಕತೆ ಕಾಯಕತತ್ವದ ಅನುಷ್ಠಾನ, ಮೌಲ್ಯಗಳ ಹಸ್ತಾಂತರದ ಕ್ಷಣ, ಅಪ್ಪ-ಮಗನ ನಂಟಿನ ನೈಜ ಚಿತ್ರಣವನ್ನು ನೀಡುವ ಮೂಲಕ ಓದುಗರ ಮನತಟ್ಟುತ್ತದೆ.

## ▫ ಪಾತ್ರ ಚಿತ್ರಣ ಮಾಡಿರಿ

ವಿದ್ಯಾರ್ಥಿಗಳು ತಮಗೆ ಇಷ್ಟವಾದ ಪಾತ್ರವನ್ನು ಗುರುತಿಸಿ ಅದಕ್ಕೆ ಕಾರಣವನ್ನು ಹೇಳಲಿ. ತರಗತಿ ಚರ್ಚೆಯನ್ನು ನಡೆಸಿದ ಬಳಿಕ ತಮಗಿಷ್ಟವಾದ ಪಾತ್ರದ ಚಿತ್ರಣವನ್ನು ವೈಯಕ್ತಿಕವಾಗಿ ಬರೆಯಲು ಹೇಳುವುದು.

## 'ಅಂಚೆಯ ಅಣ್ಣ'

ಕನ್ನಡದ ಹೆಸರಾಂತ ಸಾಹಿತಿ ಜಯಂತ ಕಾಯ್ಕಿಣಿಯವರು ಬರೆದ 'ಮಲೆಗಳಲ್ಲಿ ಮರೆಯಾದ ಅಂಚೆಯಣ್ಣ' ಎಂಬ ಅಂಕಣ ಬರಹದಲ್ಲಿ ಬರುವ ಕತೆಯ ಪ್ರಧಾನ ಪಾತ್ರವೇ 'ಅಂಚೆಯಣ್ಣ'ನದು.

ಈ ಲೇಖನದಲ್ಲಿ ಬರುವ 'ಅಂಚೆಯಣ್ಣ' ಮಲೆನಾಡಿನ ಕಾಡು, ಹೊಳೆಗಳಿರುವ ಒಂದೆರಡೇ ಮನೆಗಳಿರುವ ಹಳ್ಳಿಗಳಿಗೆ ಪತ್ರವನ್ನು ಹಂಚುವ ಕಾಯಕದಲ್ಲಿರುವವನು. ಆತನಿಗೆ ಈ ಹಳ್ಳಿಗಳಲ್ಲಿ ಒಮ್ಮೆ ತಿರುಗಿ ಬರಲು ಒಂದು ವಾರ ಬೇಕು. ಈಗ ಆತ ನಿವೃತ್ತಿಯ ಅಂಚಿನಲ್ಲಿದ್ದಾನೆ. ವಯೋಸಹಜ ಸಮಸ್ಯೆಗಳೂ ಇವೆ. ಆದರೆ, ಕೆಲಸ ಬಿಟ್ಟರೆ ಜೀವನ ನಿರ್ವಹಣೆಗೆ ಬೇರೆ ಗತಿಯಿಲ್ಲವೆಂದು ಚಿಂತಿಸುತ್ತಿರುವಾಗ ಮೇಲಧಿಕಾರಿಗಳು ಮಗನಿಗೆ ಕೆಲಸವನ್ನು ವರ್ಗಾಯಿಸಲು ಪರವಾನಗಿ ಇತ್ತಾಗ ಬಹಳ ಸಂತಸಪಡುತ್ತಾನೆ. ಮುಂದೆ ಆತ ತನ್ನ ಕೆಲಸವನ್ನು ಮಗನಿಗೆ ವರ್ಗಾಯಿಸುವ ಸಂದರ್ಭದಲ್ಲಿ ಅಂಚೆಯ ಚೀಲದ ಮಹತ್ವವನ್ನು ತಿಳಿಸುತ್ತಾ, "ಜೀವ ಹೋದರೂ ಸರಿ ಮಳೆಯಿಂದ, ಗಾಳಿಯಿಂದ, ಹೊಳೆ ನೀರಿನಿಂದ ಇದನ್ನು ಕಾಪಾಡಬೇಕು. ಇದು ಬರೇ ಕಾಗದಗಳಲ್ಲ. ಯಾರ್‍ಯಾರನ್ನೋ ತಲುಪಲೇ ಬೇಕಾದ ಸ್ವರಗಳು. ಜೀವ ಹೋದರೂ ಚಿಂತೆಯಿಲ್ಲ" ಎಂಬ ಮಾತುಗಳು ಆತನ ಕರ್ತವ್ಯ ನಿಷ್ಠೆ, ವೃತ್ತಿ ಗೌರವಕ್ಕೆ ಹಿಡಿದ ಕೈಗನ್ನಡಿ.

ಹೊಳೆ ದಾಟುವ ಸಂದರ್ಭದಲ್ಲಿ ಆಯಾಸಗೊಂಡ ಅಪ್ಪನನ್ನು ಮಗ ಹೆಗಲೇರಿಸಿಕೊಂಡು ಆಚೆ ದಡಕ್ಕೆ ತಲುಪಿಸುವಾಗ ಅವರಿಬ್ಬರೂ ದೈಹಿಕವಾಗಿ ಮಾನಸಿಕವಾಗಿ ಮತ್ತಷ್ಟು ಹತ್ತಿರವಾಗುತ್ತಾರೆ. ಕಳೆದ ಹತ್ತು ವರ್ಷಗಳಲ್ಲಿ ಆಡದೇ ಉಳಿದಿದ್ದ ಕಷ್ಟ ಸುಖಗಳನ್ನು ಹಂಚಿಕೊಳ್ಳುತ್ತಾರೆ ಎಂಬಲ್ಲಿ ಆತ ಕರ್ತವ್ಯದಲ್ಲಿರುವಾಗ ಕುಟುಂಬದಿಂದ ಅನಿವಾರ್ಯವಾಗಿ ದೂರವಿರಬೇಕಾದ ಸಂದರ್ಭಗಳ ಕುರಿತು ಬೊಟ್ಟು ಮಾಡುತ್ತದೆ.

ಮುಂದೆ ಮಗನನ್ನು ಹಳ್ಳಿಯವರಿಗೆ ಪರಿಚಯಿಸುವ ಕ್ಷಣಗಳು, ಒಂಟಿಯಾದ ಕುರುಡಿ ಅಜ್ಜಿಗೆ ಸುಳ್ಳು ಸುಳ್ಳೇ ಪತ್ರವನ್ನು ಓದಿ ಹೇಳುವ ಸಂದರ್ಭ ಮುಂತಾದ ಸನ್ನಿವೇಶಗಳು ಆತ ಹಳ್ಳಿಯವರೊಂದಿಗೆ ಇಟ್ಟುಕೊಂಡಿದ್ದ ಉತ್ತಮ ಬಾಂಧವ್ಯವನ್ನು ತಿಳಿಸುತ್ತದೆ. ರಾತ್ರಿ ಧರ್ಮಶಾಲೆಯಲ್ಲಿ ತಂಗಿದ್ದಾಗ ಪತ್ರವನ್ನು ವಿಂಗಡಿಸುವ ಸಂದರ್ಭ ಬಿರುಗಾಳಿಗೆ ತರಗೆಲೆಯಂತೆ ಹಾರುವ ಪತ್ರಗಳನ್ನು ಜೀವದ ಹಂಗು ತೊರೆದು ಹೆಕ್ಕಿ ಎದೆಗವಚಿಕೊಂಡು ಬರುವ ದೃಶ್ಯ ಮಗನಿಗೆ ತನ್ನ ವೃತ್ತಿಯ ಮಹತ್ವವನ್ನು ಸಾರುವಲ್ಲಿ ಯಶಸ್ವಿಯಾಗುತ್ತದೆ. ಮರುದಿನದಿಂದ ಮಗನನ್ನು ಅಂಚೆ ಚೀಲದೊಂದಿಗೆ ಕಳುಹಿಸುವ ದೃಶ್ಯ ತನ್ನ ಜವಾಬ್ದಾರಿಯನ್ನು ಸಂಪೂರ್ಣವಾಗಿ ನಿರ್ವಹಿಸಿದ ಒಂದು ಸಾರ್ಥಕತೆಯ ಭಾವ ಆತನಲ್ಲಿ ಮೂಡಿದಂತೆ ಭಾಸವಾಗುತ್ತದೆ.

ಒಟ್ಟಿನಲ್ಲಿ ಈ ಅಂಚೆಯ ಅಣ್ಣ ನಮ್ಮಲ್ಲಿ ಕಾಯಕತತ್ವದ ಅನುಷ್ಠಾನದ ಮಾದರಿಯಾಗಿ, ಒಳ್ಳೆಯ ತಂದೆಯಾಗಿ, ಉತ್ತಮ ವ್ಯಕ್ತಿಯಾಗಿ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯುತ್ತಾನೆ.

### ◘ ಲೇಖನ ತಯಾರಿಸಿರಿ

ವಿದ್ಯಾರ್ಥಿಗಳು ತರಗತಿಯಲ್ಲಿ 'ಅಂಚೆಯ ಅಣ್ಣ' ವೃತ್ತಿಯ ಮಹತ್ವ, ಗೌರವ, ಸಮಾಜದಲ್ಲಿ ಇವರ ಅಗತ್ಯ..... ಇತ್ಯಾದಿ ವಿಚಾರಗಳ ಕುರಿತು ಚರ್ಚಿಸಿ ಲೇಖನಕ್ಕೆ ಬೇಕಾದ ಮಾಹಿತಿ ಸಂಗ್ರಹಿಸಿ ಲೇಖನವನ್ನು ತಯಾರಿಸಲಿ.

ಚರ್ಚೆಯಲ್ಲಿ ಮೂಡಿರಬಹುದಾದ ಮಾಹಿತಿಗಳು

- ಪತ್ರದೊಂದಿಗೆ ಭಾವನೆಗಳನ್ನು ಹಂಚುವ ಕಾಯಕ.
- ಊರಿನ ಮೂಲೆ ಮೂಲೆಗೂ ಸಂದೇಶ ತಲುಪಿಸಲು ಪಡುವ ಕಷ್ಟ
- ಸಕಾಲದಲ್ಲಿ ಮಾಹಿತಿಯ ರವಾನೆ
- 
- 

ಇತ್ಯಾದಿಗಳು.

- ಲೇಖನ ಹೀಗೂ ಇರಬಹುದು.

## ಅಂಚೆಯ ಅಣ್ಣ

ಮಾನವನ ನಾಗರಿಕತೆಯ ಮಹತ್ವದ ಮೈಲಿಗಲ್ಲು ಭಾಷೆಯ ಸೃಷ್ಟಿ. ಸಂದೇಶ ರವಾನೆ ಬಹಳ ಹಿಂದಿನಿಂದಲೂ ಪ್ರಪಂಚದೆಲ್ಲೆಡೆ ಚಾಲ್ತಿಯಲ್ಲಿದೆ. ಆ ಮೂಲಕ ಪರಸ್ಪರ ಅಭಿಪ್ರಾಯಗಳ ಸಂವಹನ ನಡೆಯಿತು. ಬಳಿಕ ದೂರದಲ್ಲಿರುವವರಿಗೆ ಸಂದೇಶಗಳನ್ನು ಕಳುಹಿಸಲು ವೈವಿಧ್ಯಮಯ ಮಾರ್ಗಗಳನ್ನು ಸ್ವೀಕರಿಸಲಾಯಿತು. ಅದರಲ್ಲಿ ಪ್ರಮುಖವಾದುದು ಅಂಚೆ. ಇತ್ತೀಚೆಗಿನ ವರೆಗೆ ಎಂದರೆ, ಮೊಬೈಲ್ ಕ್ರಾಂತಿಯಾಗುವವರೆಗೂ ಅಂಚೆಯ ಮೂಲಕ ಬರುವ ಪತ್ರಗಳು ಸುಮಧುರವಾದ ಭಾವನೆಯ ಸಂಬಂಧಗಳ ಪುನಶ್ಚೇತನಕ್ಕೆ ಕಾರಣವಾಗುತ್ತಿದ್ದವು. ಹಾಗಾಗಿಯೇ ಪತ್ರವನ್ನು ಮನೆ ಬಾಗಿಲಿಗೆ ತಂದೀಯುವ ಅಂಚೆಯಣ್ಣ ಜನರ ಮಧ್ಯೆ ಸಂಬಂಧಗಳ ಜೀವಂತ ಸೇತುವೆಯಾಗುತ್ತಿದ್ದ.

ಹಿಂದಿನ ಕಾಲದಲ್ಲಿ ಅಂಚೆಯಣ್ಣ ಕೇವಲ ಪತ್ರವನ್ನು ತರುವವ ಮಾತ್ರವಾಗಿರದೆ ಪ್ರತಿ ಮನೆ ಮನೆಯ ಆಗು ಹೋಗುಗಳನ್ನು ಬಲ್ಲ, ಅವರ ನೋವಿಗೆ ಸ್ಪಂದಿಸುವ, ಪತ್ರಗಳನ್ನು ಓದಿ ಹೇಳುವ, ಅಗತ್ಯವಿರುವವರಿಗೆ ಲಿಪಿಕಾರನೂ ಆಗಿ ಕಾಗದಗಳನ್ನು ಬರೆಯುವ ವ್ಯಕ್ತಿಯೂ ಆಗಿರುತ್ತಿದ್ದ. ಹಾಗಾಗಿಯೇ ಈತ ಉಳಿದೆಲ್ಲ ಸರಕಾರಿ ನೌಕರರಿಗಿಂತ ಜನಸಾಮಾನ್ಯರ ಮನೆ–ಮನಸ್ಸುಗಳಿಗೆ ಹತ್ತಿರವಾಗಿ ಅವರ ಮನೆಯ ಸದಸ್ಯನೇ ಆಗಿಬಿಡುತ್ತಿದ್ದ. ಆತನಲ್ಲಿ ಯಾವುದೇ ಮುಚ್ಚುಮರೆಯಿಲ್ಲದೆ ತಮ್ಮ ಮನಸ್ಸನ್ನು ತೆರೆದಿಡುತ್ತಿದ್ದರು. ಅಂಚೆಯಣ್ಣ ಹೊತ್ತು ತರುವ ಪತ್ರಗಳಲ್ಲಿ ತಮಗೆ ಪತ್ರ ಇರಬಹುದೇ ಎಂದು ಕಾತರದಿಂದ ಕಾಯುವವರಿಗೆ ಆತ ನಡೆದಾಡುವ ದೇವರೇ ಆಗಿಬಿಡುತ್ತಿದ್ದ. ತಮ್ಮ ಹೆಸರಿಗೊಂದು ಪತ್ರ ಬಂದಾಗ, ವಿಷಯ ಏನೇ ಇರಲಿ, ಆ ಪತ್ರ ಅದರ ಮೇಲಿರುವ ಸ್ಟಾಂಪ್, ಅಂಟಿನ ಘಮಲು

ಎಲ್ಲವೂ ಏನೋ ಒಂದು ಪುಳಕವನ್ನು ನೀಡುವುದಂತೂ ತಪ್ಪಲ್ಲ. ಆ ಪುಳಕವನ್ನು ತಂದು ಕೈಗೊಪ್ಪಿಸುವ ಅಂಚೆಯಣ್ಣ ಸಕಾಲಕ್ಕೆ ತಲುಪಬೇಕಾದ ಪತ್ರಗಳನ್ನು ತಲುಪಿಸುವ ಮೂಲಕ ಎಷ್ಟೋ ಜನರ ಭವಿಷ್ಯ ನಿರ್ಮಾಣಕ್ಕೆ ಕಾರಣವಾಗುತ್ತಾನೆ.

ಒಟ್ಟಿನಲ್ಲಿ "ಅವನು ಕೇವಲ ಟಪಾಲು ಬಟವಾಡೆಯ ವೃತ್ತಿಯವನಾಗಿರುವುದಿಲ್ಲ. ಅವನು ಮನುಷ್ಯರಿಂದ ಮನುಷ್ಯರಿಗೆ ಅದೇನನ್ನೋ ದಾಟಿಸುವ ಮಾರುವೇಷದ ದೇವರಾಗಿರುತ್ತಾನೆ. ಸಣ್ಣ ಊರುಗಳಲ್ಲಂತೂ ಅವನು ಅಂತರಂಗದ ಸದಸ್ಯ. ನೋವು–ನಲಿವುಗಳ, ಸೋಲು–ಗೆಲುವುಗಳ, ರೋಗ–ರುಜಿನಗಳ,... ಎಲ್ಲಾ ವಿಚಾರಗಳನ್ನೂ ಮನೆಯಿಂದ ಮನೆಗೆ ದಾಟಿಸುತ್ತಲೇ ಇರುವ ಬೆವರು ಒರೆಸಿಕೊಂಡು ಓಡುತ್ತಾ ಕಾಗದದ ಕಟ್ಟನ್ನು ಹ್ಯಾಂಡಲ್ಲಿಗೆ ಸಿಕ್ಕಿಸಿಕೊಂಡು ಸೈಕಲ್ ಏರುತ್ತಿರುವಾಗಲೇ ಯಾರನ್ನೋ ಕಂಡು ಪಕ್ಕನೆ ನಿಲ್ಲಿಸಿ ಕಾಗದ ಹುಡುಕಿ ಕೊಡುವ ನೆಂಟ. ಆತ ಸಮಾಜದ ಒಳಬಾಳಿನ ಸದಸ್ಯ" – ಎಂಬ ಲೇಖಕರ ಮಾತುಗಳು ಅಂಚೆಯಣ್ಣನ ಕಾಯಕದ ಮಹತ್ವವನ್ನು ಸಾರುತ್ತವೆ.

## ◻ ಸಂಧಿ ಗುರುತಿಸಿರಿ

ವಿದ್ಯಾರ್ಥಿಗಳನ್ನು ಕನ್ನಡ ಸಂಧಿಗಳ ಹೆಸರನ್ನು ಹೇಳಿಸಿ ಮೂರು ಗುಂಪು ಮಾಡಿಸುವುದು. ಆ ಗುಂಪುಗಳಿಗೆ ಲೋಪ, ಆಗಮ, ಆದೇಶ ಎಂದು ಹೆಸರುಗಳನ್ನು ನೀಡುವುದು. ಬಳಿಕ ಆ ಸಂಧಿ ಕಾರ್ಯಗಳ ಕುರಿತು ತರಗತಿಯಲ್ಲಿ ಚರ್ಚಿಸುವುದು. ಆ ಮೇಲೆ ತಮ್ಮ ಗುಂಪಿನ ಹೆಸರಿಗನುಗುಣವಾಗಿ ಪಾಠಭಾಗದಲ್ಲಿ ಬಂದಿರುವ ಸಂಧಿ ಪದಗಳನ್ನು ಗುರುತಿಸಿ ಪಟ್ಟಿ ಮಾಡಲು ಹೇಳುವುದು. ಗುಂಪಿನಿಂದ ಒಬ್ಬರು ಮಂಡಿಸಲಿ. ಬಿಟ್ಟು ಹೋದ ಪದಗಳಿದ್ದರೆ, ಅವುಗಳನ್ನು ಸೇರಿಸಿ ಎಲ್ಲವನ್ನೂ ತಮ್ಮ ಚಟುವಟಿಕೆ ಪುಸ್ತಕದಲ್ಲಿ ಬರೆದುಕೊಳ್ಳಲು ಹೇಳುವುದು.

## ◻ ಚಿತ್ರ ರಚಿಸಿರಿ

ಪಾಠಭಾಗದಲ್ಲಿ ಬರುವ ವಿವಿಧ ಸನ್ನಿವೇಶಗಳನ್ನು ಗುರುತಿಸಲು ಹೇಳುವುದು. ಆ ಬಳಿಕ ಅವುಗಳಲ್ಲಿ ಇಷ್ಟವಾದುದನ್ನು ಆಯ್ದುಕೊಂಡು ಚಿತ್ರ ರಚಿಸಲು ಹೇಳುವುದು. ಉತ್ತಮವಾದ ಚಿತ್ರವನ್ನು ಭಿತ್ತಿಪತ್ರಿಕೆಯಲ್ಲಿ ಪ್ರದರ್ಶಿಸುವುದು.

ಉದಾ : ಸನ್ನಿವೇಶಗಳು

- ಮಗನ ಬೆನ್ನನ್ನೇರಿ ಹೊಳೆದಾಟುವ ಅಪ್ಪ
- ಊರಿನ ಒಂಟಿ ಕುರುಡಿ ಅಜ್ಜಿಗೆ ಪತ್ರವನ್ನು ಓದಿ ಹೇಳುವ ಅಂಚೆಯ ಅಣ್ಣ
- ಹುಡುಗ ತನ್ನ ಮೊದಲ ರೂಟ್‌ಗೆ ಸಿದ್ಧನಾದ
- 
- 

**ಪೂರಕ ಪಠ್ಯಸಾಮಗ್ರಿ**

"The postman in mountains" ಸಿನೆಮಾವನ್ನು ಗೂಗುಲ್‌ನಲ್ಲಿ ನೋಡಬಹುದು. ಅದರ ವಿಳಾಸ

- https://youtube/SMZC mlwvMGE

## ತರಗತಿ IX

## ಕನ್ನಡ I

## ಘಟಕ 3 : ಒಲುಮೆಯ ಚಿಲುಮೆ

### ಟಿಪ್ಪಣಿ ಬರೆಯುವುದು

ವಿದ್ಯಾರ್ಥಿಗಳು 'ಸಂಜೆ ಮೌನ' ಕವನವನ್ನು ಓದಿ ಆಶಯವನ್ನು ತಿಳಿದುಕೊಂಡಿರುವರು. ಪ್ರಕೃತಿಯೊಂದಿಗೆ ಮಾನವನ ಒಡನಾಟ ಮತ್ತು ಪ್ರಕೃತಿಯನ್ನು ನಾಶಮಾಡಿದರೆ ಆಗುವ ತೊಂದರೆಗಳ ಕುರಿತಾದ ವೀಡಿಯೋ ಪ್ರದರ್ಶಿಸುವುದು. ವೀಡಿಯೋದ ಕುರಿತು ವಿಶ್ಲೇಷಣಾತ್ಮಕ ಪ್ರಶ್ನೆಗಳನ್ನು ಕೇಳುವುದು. https://youtu.be/VuG2kQJigio (Dharithri - The Nature Song)

- ವಿಡಿಯೋದ ಆರಂಭದಲ್ಲಿ ಯಾವ ಯಾವ ದೃಶ್ಯಗಳನ್ನು ನೋಡಿದಿರಿ?
- ಮಕ್ಕಳು ಯಾಕೆ ಸಂತೋಷ ವ್ಯಕ್ತಪಡಿಸುತ್ತಿದ್ದಾರೆ?
- ಪ್ರಕೃತಿಮಾತೆಯ ಪಾತ್ರ ಮಾಡಿದ ಹುಡುಗಿಯ ಮುಖದಲ್ಲಿ ದುಃಖ ಕಾಣಿಸಿಕೊಂಡದ್ದು ಯಾಕೆ?
- 
- 
- 

ತಿಳಿದುಕೊಂಡ ಮಾಹಿತಿಗಳನ್ನುಪಯೋಗಿಸಿಕೊಂಡು ವಿದ್ಯಾರ್ಥಿಗಳು ವೈಯಕ್ತಿಕ ಟಿಪ್ಪಣಿಯನ್ನು ಬರೆದು ತರಗತಿಯಲ್ಲಿ ಮಂಡಿಸಲಿ. ಮಂಡಿಸಲಾದ ಟಿಪ್ಪಣಿಗಳ ಬಗ್ಗೆ ಚರ್ಚೆ ನಡೆಸುವುದು, ಚರ್ಚೆಯಲ್ಲಿ ಅಂಗೀಕರಿಸಿದ ವಿಚಾರಗಳನ್ನು ಸೇರಿಸಿಕೊಂಡು ಪುನಃ ಬರೆಯಲಿ.

### ಟಿಪ್ಪಣಿ ಹೀಗೂ ಇರಬಹುದಲ್ಲವೆ?

ಪ್ರಕೃತಿ ಮತ್ತು ಮಾನವನ ನಡುವಿನ ಅವಿನಾಭಾವ ಸಂಬಂಧ ಇಂದು ನಿನ್ನೆಯದಲ್ಲ. ನಮ್ಮ ಪುರಾಣೇತಿಹಾಸಗಳನ್ನು ಗಮನಿಸಿದರೆ ಪ್ರಕೃತಿಯು ಮಾನವ ಜೀವನದ ಅವಿಭಾಜ್ಯ ಅಂಗ ಎಂಬುದು ಸ್ಪಷ್ಟವಾಗುತ್ತದೆ. ಮಾನವನ ಪ್ರತಿಯೊಂದು ಚಟುವಟಿಕೆಯೂ ಪ್ರಕೃತಿಯಲ್ಲಾಗುವ ವಿವಿಧ ಬದಲಾವಣೆಗಳಿಗೆ ಅನುಗುಣವಾಗಿಯೇ ಇದೆ. ಹಿಂದೆ ಋಷಿಮುನಿಗಳು, ರಾಜಮಹಾರಾಜರು ತಪಸ್ಸನ್ನಾಚರಿಸಲು, ಇಹದ ಜಂಜಾಟಗಳಿಂದ, ರಾಜ ಕಾರ್ಯಗಳಿಂದ ದೂರವಾಗಿ ಪ್ರಶಾಂತ ಜೀವನವನ್ನು ನಡೆಸಲು ಪ್ರಾಕೃತಿಕ ಶ್ರೀಮಂತಿಕೆಯುಳ್ಳ ವನಪ್ರದೇಶವನ್ನೇ ಆಯ್ದುಕೊಳ್ಳುತ್ತಿದ್ದರು. ಹಾಗೆಯೇ ಪ್ರಕೃತಿಯು ಸಾಹಿತ್ಯ ಕ್ಷೇತ್ರದ ಮೇಲೂ ತನ್ನ ಪ್ರಭಾವವನ್ನು ಬೀರಿದೆ.

'ಸಂಜೆ ಮೌನ' ಕವನದಲ್ಲಿ ಜಿ.ಎಸ್ ಶಿವರುದ್ರಪ್ಪನವರು ಪ್ರಕೃತಿ ಸೌಂದರ್ಯ ಹಾಗೂ ಅಲ್ಲಿ ನೆಲೆಸಿರುವ ಪ್ರಶಾಂತ ವಾತಾವರಣವನ್ನು ವರ್ಣಿಸಿದ್ದಾರೆ. ಅದನ್ನು ಆಸ್ವಾದಿಸಲು ಕರೆಕೊಟ್ಟಿದ್ದಾರೆ. ಅಲ್ಲಿ ವರ್ಣಿಸಲಾದ ಹುಚ್ಚು ಹುಚ್ಚಾಗಿ, ದಟ್ಟವಾಗಿ ಬೆಳೆದು ನಿಂತ ಹಚ್ಚಹಸುರಾಗಿ ಕಂಗೊಳಿಸುವ ಪ್ರಕೃತಿಯು ಇಂದು ಕಣ್ಮರೆಯಾಗುತ್ತಿದೆ. ಮನುಷ್ಯನು ತನ್ನ ಸ್ವಾರ್ಥಕ್ಕಾಗಿ ದೇವರ ವರವಾದ ಪ್ರಕೃತಿಯನ್ನು ನಾಶಮಾಡಿ ತನ್ನದೇ ನೆಮ್ಮದಿಯ ನೆಲೆಯನ್ನು ಕಳೆದುಕೊಳ್ಳುತ್ತಿದ್ದಾನೆ. ಪ್ರಕೃತಿಯ ಸುಂದರವಾದ ನೆಲೆಗಳಿಗೆ ಭೇಟಿಕೊಡುವ ಮಾನವನು ಅಲ್ಲೇ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಎಸೆಯುವುದು, ಗಿಡಮರಗಳನ್ನು ಕಡಿಯುವುದು, ನದಿಕೆರೆಗಳಿಗೆ ತ್ಯಾಜ್ಯವನ್ನೆಸೆದು ಮಲಿನಗೊಳಿಸುವುದು,

ಜಲಮೂಲಗಳಿಗೆ ವಿಷವಸ್ತುಗಳನ್ನು ಹರಿಯಬಿಡುವುದೇ ಮುಂತಾದ ಅನೈತಿಕ ಚಟುವಟಿಕೆಗಳ ಮೂಲಕ ಪ್ರಕೃತಿಯನ್ನು ಹಾಳುಗೆಡವುತ್ತಿದ್ದಾನೆ. ಮನೋರಂಜನೆಗಾಗಿ ಪ್ರಕೃತಿಯ ಮೊರೆಹೊಗುವ ಮಾನವನು ಇಂದು ನಶಿಸುತ್ತಿರುವ ಪ್ರಕೃತಿಯನ್ನು ಸಂರಕ್ಷಿಸಬೇಕಾಗಿದೆ. ಪ್ರಕೃತಿಯ ಆಸ್ವಾದಕನಾಗಿ, ಫಲಾನುಭವಿಯಾಗಿ, ಭಕ್ತನಾಗಿ ಪ್ರಕೃತಿಯನ್ನು ಸಂರಕ್ಷಿಸುವುದು ಅವನ ಹೊಣೆಯಾಗಿದೆ.

ಪೂರಕ ವಿಡಿಯೋಗಳು:

https://youtu.be/ZNYF76Vs6QI

parisarageethe New.webJun5

ಪೂರಕ ಓದು :

## ಪರಿಸರ ಗೀತೆ

ಸದ್ದಿರದ ಪಸುರುಡೆಯ ಮಲೆನಾಡ ಬನಗಳು
ಮೊರೆವ ತೊರೆಯೆಡೆಯಲ್ಲಿ ಗುಡಿಸಲೊಂದಿರಲಿ
ಅಲ್ಲಿ ಗಿಳಿಗೊರವಂಕ ಕೋಗಿಲೆಗಳಿಂಚರವು
ಕಲೆಯು ತಲೆಯಲೆಯಾಗಿ ತೇಲಿ ಬರುತಿರಲಿ ।।ಸ।।

ಅಲ್ಲಿ ಬಳಿ ಪಸಲೆಯಲಿ ದನಗಳಂಬಾ ಎಂಬ
ದನಿಯು ದನಕಾಯುವವನ ಕೊಳಲೊಡನೆ ಬರಲಿ
ಅಲ್ಲಿ ಸಿರಿಗನ್ನಡದ ಶಬ್ದಗಳ ಹಬ್ಬಗಳು
ದಿನ ದಿನವು ಸವಿಯೂಟವಿಕ್ಕುತಿರಲೆನಗೆ ।।ಸ।।

ಬಾಂದಳದಿ ಹಾರಿದರು ಬುವಿಯಲ್ಲಿ ಜಾರುತಿಹ
ರಸಿಕನಾಗಿಹನೊಬ್ಬ ಗೆಳೆಯನಿರಲೆನಗೆ
ಬೈಗಾಗೆ ನಮ್ಮೊಡನೆ ಗಳಪಿಯಲೆದಡ್ಡಾಡೆ
ಗೋಪಾಲನಾಗಿರುವ ತಿಮ್ಮನೆನಗಿರಲಿ ।।ಸ।।

ಮೇಲೆ ಬಾಳನು ಬಿಟ್ಟು ನಾನುಳಿದು ಮರೆಯಾಗೆ
ನನ್ನಾಸೆ ಏನೆಂದು ಎಲ್ಲರಂತಿರಲಿ
ಸಗ್ಗವಿವನೊಳಗೊಂಡು ಇರಲು ಸಗ್ಗವೆ ಇರಲಿ
ನರಕವಿವನೊಳಗೊಂಡ ಇರಲು ನರಕವೆ ಇರಲಿ ।।ಸ।।

ಕುವೆಂಪು

website ವಿಳಾಸ https://youtu.be/BBe8Yt5oZGg

# ಏಳು ಚಿನ್ನ...... ಬೆಳಗಾಯ್ತು ಅಣ್ಣ

ಏಳು ಚಿನ್ನ ಬೆಳಗಾಯ್ತು ಅಣ್ಣ
ಮೂಡಲವು ತೆರೆಯಿತಣ್ಣ
ನಕ್ಷತ್ರ ಜಾರಿ ತಮವೆಲ್ಲ ಸೋರಿ
ಮಿಗಿಲಹುದು ಬಾನ ಬಣ್ಣ
ಜೇನ್ನೊಣದ ಎದೆಗೆ ಹೂಬಾಣ ಹೂಡಿ
ಜುಮ್ಮೆಂದು ಬಿಟ್ಟ ಬಾಣ
ಗುಡಿ ಗೋಪುರಕ್ಕು ಬಲೆ ಬೀಸಿ ಬಂದ
ಅಗೋ ಬೆಳಕು ಬೇಟೆಗಾರ

ನಿಶೆಯಿಳಿದ ಉಷೆಯ ಎಳನಗೆಯ ಬಗೆಗೆ
ಸೋತಿರಲು ಜಗವು ಸವಿಗೆ
ಕಣ್ಣೆದಿರು ಒಂದು ಕಟ್ಟಿತ್ತು ಕನಸು
ಕೂಗೊಂದು ಬಂತು ಕಿವಿಗೆ
ಮಕ್ಕಳಿರ ಕೇಳಿ ರಸಕುಡಿಯಲೇಳಿ
ಹುಸಿನಿದ್ದೆಗೆತ್ತಿ ಸಾಕು
ಈ ತುಂಬಿ ಬಾಳು ತುಂಬಿರುವ ತನಕ
ತುಂತುಂಬಿ ಕುಣಿಯಬೇಕು

ಯಾವಾಗ ಕೋಳಿ ಕೂಗಿಹುದು ಏಳಿ
ತಡವೇಕೆ ಪಾನ ಕೇಳಿ
ಮೊದಲಾಗಲೀಗ ಅಂಗಡಿಯ ಕದವ
ಈ ಕ್ಷಣಕೆ ತೆರೆಯ ಹೇಳಿ
ಜೀವನದ ನದಿಗೆ ಸೆಳೆವಿಹುದು
ಮರಣ ಬಂದೀತು ಕ್ಷಣವು ಉರುಳಿ
ಹೋದವರು ತಿರುಗಿ ಬಂದಾರೆ
ಅವರು ಬರಲಿಕ್ಕು ಇಲ್ಲ ಮರಳಿ

ಬಾಂಧವರಲುಂಟು ಮರ ಚಿಗುರಲುಂಟು
ಬರಲುಂಟೆ ಸುಗ್ಗಿ ಮತ್ತೆ
ಮುಳುಗಿರಲಿ ಮುಪ್ಪು ಚಿಂತನದಿ ತಾನು
ಹರಯಕ್ಕೆ ಬೇರೆ ಹೊತ್ತೆ

– ದ.ರಾ.ಬೇಂದ್ರೆ

## ಅಧ್ಯಾಪಕ ಪಠ್ಯ

## TEACHER TEXT

# ತರಗತಿ IX

# ಕನ್ನಡ II

| | | |
|---|---|---|
| **ಘಟಕ** | – | **ಸಾಧನೆ ಸೌಹಾರ್ದ** |
| ಪಾಠ 2 | – | ಹಚ್ಚೋಣ ಹಣತೆಗಳ (ಲೇಖನ) |
| ಪಾಠ 3 | – | ಬೆಳಕು ಹಿಡಿದವರು (ಕವನ) |
| **ಘಟಕ II** | - | **ಗ್ರಾಮೀಣ ಸೊಗಡು** |
| ಪಾಠ 1 | – | ಮೊಸರಿನ ಮಂಗಮ್ಮ |
| ಪಾಠ 2 | – | ಪರಿಸರದ ಕವಿತೆ |
| **ಘಟಕ III** | - | **ಶುಭೋದಯ** |
| ಪಾಠ 1 | – | ರಾಷ್ಟ್ರ ವಂದನೆ |
| ಪಾಠ 2 | – | ಶುಭ ಹಾರೈಕೆ |

**ಘಟಕ 1 – ಸಾಧನೆ ಸೌಹಾರ್ದ – ಯೂನಿಟ್ ಗ್ರಿಡ್** **ತರಗತಿ 9 – ಕನ್ನಡ II**

| ಪಾಠದ ಹೆಸರು | ಆಶಯ/ತಿಳುವಳಿಕೆ/ಮನೋಭಾವ | ಪ್ರಕ್ರಿಯೆ | ಪೂರಕ ಸಾಮಗ್ರಿ | ಮೌಲ್ಯನಿರ್ಣಯ |
|---|---|---|---|---|
| 'ಹಚ್ಚೋಣ ಹಣತೆಗಳ...' (ಲೇಖನ)<br><br>ನೇಮಿಚಂದ್ರ | • ಕನ್ನಡ ಸಾಹಿತ್ಯದಲ್ಲಿ ಬಡವರ ಕಷ್ಟ ಕಾರ್ಪಣ್ಯಗಳ ಕುರಿತು ತಿಳಿಸುವ ಅನೇಕ ಲೇಖನಗಳಿವೆ.<br>• ಸಮಾಜದಲ್ಲಿ ಬಡತನದಿಂದ ಬಳಲುವವರಿಗೆ ಕೈಲಾದ ಸಹಾಯ ಮಾಡಬೇಕು.<br>• ಜೀವನದಲ್ಲಿ ಶಿಕ್ಷಣಕ್ಕೆ ಮಹತ್ತರ ಸ್ಥಾನವಿದೆ<br>• ಶಿಕ್ಷಣ ವಂಚಿತರಾದ ಜನರಿಗೆ ಸರಕಾರವು ನೆರವು ನೀಡಬೇಕು.<br>• ಪ್ರತಿಯೊಬ್ಬರು ಸಮಾಜದ ಒಳಿತಿಗಾಗಿ ಶ್ರಮಿಸಬೇಕು. | • ಲೇಖನವನ್ನು ಓದುವುದು<br>• ಆಶಯಗ್ರಹಣ ಪ್ರಶ್ನೆಗಳಿಗೆ ಉತ್ತರ ಬರೆಯುವುದು.<br>• ಅಭಿಪ್ರಾಯ ಬರೆಯುವುದು.<br>• ಕರಪತ್ರ ಬರೆಯುವುದು<br>• ಮನವಿ ಪತ್ರ ಬರೆಯುವುದು<br>• ಪ್ರಬಂಧ ಬರೆಯುವುದು. | ಪಠ್ಯಪುಸ್ತಕ<br><br>ನೇಮಿಚಂದ್ರರ ಅಂಕಣ ಬರಹಗಳು | • ಬಾಯ್ದೆರೆ ಓದು<br>• ಅಭಿಪ್ರಾಯ ಟಿಪ್ಪಣಿ<br>• ಕರಪತ್ರ<br>• ಮನವಿ ಪತ್ರ<br>• ಪ್ರಬಂಧ |

# ಹಚ್ಚೋಣ ಹಣತೆಗಳ...

## ◘ ಚಟುವಟಿಕೆಗಳು

- **ಓದುವುದು**

ಹಚ್ಚೋಣ ಹಣತೆಗಳ...ಲೇಖನವನ್ನು ಮಕ್ಕಳು ಓದಲಿ. ಪ್ರತಿಬೆಂಚಿನಿಂದ ಒಬ್ಬರಂತೆ ವಿದ್ಯಾರ್ಥಿಗಳಲ್ಲಿ ಓದಲು ಸೂಚಿಸುವುದು. ಓದಿನಲ್ಲಿ ತಪ್ಪಿದವರನ್ನು ತಿದ್ದುವುದು.

- **ಉತ್ತರಿಸುವುದು**

ಪಾಠದ ಕೊನೆಯಲ್ಲಿ ನೀಡಲಾದ ಪ್ರಶ್ನೆಗಳಿಗೆ ಸಮರ್ಪಕ ಉತ್ತರಗಳನ್ನು ಪಡೆಯುವ ಮೂಲಕ ಗದ್ಯದ ಆಶಯವನ್ನು ವಿದ್ಯಾರ್ಥಿಗಳು ಅರಿತುಕೊಂಡಿದ್ದಾರೆಯೇ ಎಂದು ತಿಳಿಯುವುದಕ್ಕೋಸ್ಕರ ಆಶಯಗ್ರಹಣ ಪ್ರಶ್ನೆಗಳಿಗೆ ಉತ್ತರ ಹೇಳಿಸುವುದು. ಉತ್ತರವನ್ನು ಪರಿಷ್ಕರಿಸಿ ಚಟುವಟಿಕೆ ಪುಸ್ತಕದಲ್ಲಿ ಬರೆಯಲಿ.

- **ಅಭಿಪ್ರಾಯ ಬರೆಯುವುದು**

ವಿದ್ಯಾರ್ಥಿಗಳು ಹಚ್ಚೋಣ ಹಣತೆಗಳ... ಲೇಖನವನ್ನು ಈಗಾಗಲೇ ಓದಿ ತಿಳಿದಿರುವರು.

- ಸಮಾಜದ ಒಳಿತಿಗಾಗಿ ದುಡಿದ ಮಹಾನುಭಾವರ ಚಿತ್ರಗಳನ್ನು, ಮಾಹಿತಿಗಳನ್ನು ಅಂತರ್ಜಾಲದ ಸಹಾಯದಿಂದ ಕಲೆ ಹಾಕಿ ಪ್ರದರ್ಶಿಸುವುದು. ಬಳಿಕ ವಿದ್ಯಾರ್ಥಿಗಳಲ್ಲಿ ಸಮಾಜ ಸುಧಾರಕರು ನಿಸ್ವಾರ್ಥಿಗಳಾಗಿ ಸಮಾಜದ ಒಳಿತಿಗಾಗಿ ಏನೇನು ಮಾಡಿದ್ದಾರೆ? ಎಂದು ಪ್ರಶ್ನಿಸುವುದು. ಬಳಿಕ ವಿದ್ಯಾರ್ಥಿಗಳ ಅಭಿಪ್ರಾಯವನ್ನು ಕ್ರೋಡೀಕರಿಸಿ ಸಮಾಜದ ಒಳಿತಿಗಾಗಿ ನಾವೇನು ಮಾಡಬಹುದು? ಎಂಬುದರ ಕುರಿತು ವಿಶ್ಲೇಷಿಸಿ ಅಭಿಪ್ರಾಯವನ್ನು ಬರೆಯಲಿ. ಅಗತ್ಯವಿದ್ದಲ್ಲಿ ಅಧ್ಯಾಪಕರು ಸೂಕ್ತ ಸಲಹೆಗಳನ್ನು ನೀಡುವುದು. youtube ವಿಳಾಸ https://vijaykarnatak.indiatimes.com

- ಅಭಿಪ್ರಾಯ ಹೀಗೂ ಇರಬಹುದು.

ಮನುಷ್ಯ ಸಂಘಜೀವಿ. ಸಮಾಜಕ್ಕೂ ಮನುಷ್ಯನಿಗೂ ಅವಿನಾಭಾವ ಸಂಬಂಧವಿದೆ. ಸಮಾಜದ ಒಳಿತೆ ಜನತೆಯ ಒಳಿತು. ಆರೋಗ್ಯಕರ ಸಮಾಜವೇ ಮನುಷ್ಯನ ನೆಮ್ಮದಿಗೆ ಕಾರಣ. ಆದ್ದರಿಂದ ನಾವು ಸಮಾಜದ ಒಳಿತಿಗಾಗಿ ನಿಸ್ವಾರ್ಥ ಸೇವೆ ಸಲ್ಲಿಸಬೇಕು. ಸಾಮಾಜಿಕ ಸಮಾನತೆಗಾಗಿ ದುಡಿಯಬೇಕು. ಇದಕ್ಕಾಗಿ ಸರಕಾರವು ಹತ್ತು ಹಲವು ಯೋಜನೆಗಳನ್ನು ಹಮ್ಮಿಕೊಂಡಿದೆ. ಅದನ್ನು ಜನಸಾಮಾನ್ಯರಿಗೆ, ಫಲಾನುಭವಿಗಳಿಗೆ ತಲುಪಿಸುವ ಕಾರ್ಯದಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳಬೇಕು.

ಪ್ರಪಂಚವು ಇಂದು ವೈಜ್ಞಾನಿಕವಾಗಿ ಎಷ್ಟೇ ಪ್ರಗತಿಯನ್ನು ಸಾಧಿಸಿದರೂ ಅದೆಷ್ಟೋ ಬಡಕುಟುಂಬಗಳು ಕತ್ತಲೆಯಲ್ಲೇ

ಉಳಿದುಕೊಂಡಿವೆ. ಅಂತವರನ್ನು ಗುರುತಿಸಿ ಮುಖ್ಯವಾಹಿನಿಗೆ ಕರೆತರುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಅವರ ಸಮಸ್ಯೆಗಳನ್ನರಿತು ತಮ್ಮ ಕೈಲಾದ ನೆರವನ್ನು ನೀಡಬೇಕಾಗಿದೆ. ಸರಕಾರದಿಂದ ಸಿಗುವ ಸವಲತ್ತುಗಳ ಬಗ್ಗೆ ಅವರಿಗೆ ಸೂಕ್ತ ಸಲಹೆ ಸೂಚನೆಗಳನ್ನು ನೀಡಿ ಬಹುತೇಕ ಸೌಲಭ್ಯಗಳನ್ನು ಅವರ ಕೈಗೆಟಕುವಂತೆ ಮಾಡಬೇಕು. ಮಾತ್ರವಲ್ಲದೇ ನಮ್ಮ ಸುತ್ತುಮುತ್ತಲಿರುವ ಅನೇಕ ಮಹನೀಯರ, ದಾನಿಗಳ ಸಹಾಯವನ್ನು ಪಡೆದು ಆ ಮೂಲಕ ಬಡಕುಟುಂಬಗಳ ಜೀವನಕ್ಕೆ ಆಧಾರವಾಗಬಹುದು.

ನಮ್ಮ ಸಮಾಜದಲ್ಲಿರುವ ಅದೆಷ್ಟೋ ಮಂದಿ ವಿದ್ಯಾರ್ಥಿಗಳು ಆರ್ಥಿಕ ಅಡಚಣೆಯಿಂದಾಗಿ ವಿದ್ಯಾಭ್ಯಾಸವನ್ನು ಅರ್ಧಕ್ಕೆ ಮೊಟಕುಗೊಳಿಸುತ್ತಾರೆ. ಅಂತವರನ್ನು ಗುರುತಿಸಿ ಅವರಿಗೆ ಆರ್ಥಿಕ ನೆರವನ್ನು ಒದಗಿಸುವುದು. ಇನ್ನು ಹಣದ ವ್ಯಾಮೋಹ ಹಾಗೂ ಬಾಹ್ಯ ಆಕರ್ಷಣೆಗಾಗಿ ವಿದ್ಯಾಭ್ಯಾಸವನ್ನು ಅರ್ಧಕ್ಕೆ ನಿಲ್ಲಿಸುವ ಮಕ್ಕಳಿಗೆ ವಿದ್ಯಾಭ್ಯಾಸದ ಪ್ರಾಧಾನ್ಯತೆಯ ಬಗ್ಗೆ ತಿಳುವಳಿಕೆಯನ್ನು ನೀಡುವುದು. ಆ ಮೂಲಕ ಅವರನ್ನು ಉನ್ನತ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಿಸಬೇಕು. ಉನ್ನತ ವಿದ್ಯಾಭ್ಯಾಸ ಬಯಸುವ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯ ಮಾಡುವುದರೊಂದಿಗೆ ಉಚಿತ ವಸತಿ ವ್ಯವಸ್ಥೆಯನ್ನು ಒದಗಿಸಿಕೊಡಬಹುದು. ನಿರ್ಗತಿಕರಿಗೆ ಆಶ್ರಯ ನೀಡುವುದು, ಅಲ್ಲದೆ ಬಡಮಕ್ಕಳ ಅಥವಾ ಅನಾಥ ಮಕ್ಕಳನ್ನು ದತ್ತು ತೆಗೆದುಕೊಂಡು ಅವರಿಗೆ ಬೇಕಾದ ಎಲ್ಲಾ ಸೌಕರ್ಯಗಳನ್ನು ಒದಗಿಸಿ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವುದು.

ಉದ್ಯೋಗದ ಮಾಹಿತಿ ತಿಳಿಯದ ಹಲವರಿಗೆ ಆ ಬಗ್ಗೆ ಸೂಕ್ತ ಮಾರ್ಗದರ್ಶಿ ಶಿಬಿರ, ಸ್ವ ಉದ್ಯೋಗ ತರಬೇತಿ ನೀಡುವ ಶಿಬಿರಗಳನ್ನು ಏರ್ಪಡಿಸಬೇಕು. ಹಾಗೆಯೇ ಆರೋಗ್ಯದ ಸಮಸ್ಯೆಯಿಂದ ಬಳಲುವವರಿಗೆ ಉಚಿತ ವೈದ್ಯಕೀಯ ಶಿಬಿರಗಳ ಮಾಹಿತಿ ನೀಡುವುದು. ಆ ಮೂಲಕ ಆರೋಗ್ಯ ಮುಕ್ತ ಸಮಾಜದ ಕನಸನ್ನು ನನಸಾಗಿಸಬಹುದು. ಈ ರೀತಿಯಲ್ಲಿ ನಾವು ಸಮಾಜದ ಸೇವೆಯನ್ನು ಮಾಡುವ ಮೂಲಕ ಸಮಾಜದ ಉದ್ಧಾರ ಸಾಧ್ಯವಾಗಬಹುದು.

## ◻ ಕರಪತ್ರ ಬರೆಯುವುದು

ಕರಪತ್ರವನ್ನು ರಚಿಸುವುದರ ಕುರಿತಾಗಿ ವಿದ್ಯಾರ್ಥಿಗಳಿಗೆ ಹಿಂದಿನ ತರಗತಿಗಳಲ್ಲಿ ತರಬೇತಿ ಸಿಕ್ಕಿರಬಹುದು. ಆದರೂ ಅದರ ಕುರಿತಾಗಿ ತರಗತಿಯಲ್ಲಿ ಲಘು ಚರ್ಚೆ ನಡೆಸುವುದು ಉತ್ತಮ. ಅದರ ಸ್ವರೂಪ, ಒಳಗೊಂಡಿರಬೇಕಾದ ವಿಚಾರಗಳು ಇತ್ಯಾದಿಗಳ ಬಗ್ಗೆ ಚರ್ಚೆ ನಡೆಸುವುದು. ಸಾಧ್ಯವಿದ್ದಲ್ಲಿ ಬೇರೆ ಬೇರೆ ವಿಚಾರಗಳಲ್ಲಿ ಜನಜಾಗೃತಿ ಮೂಡಿಸುವುದಕ್ಕಾಗಿ ವಿವಿಧ ಸಂಸ್ಥೆಗಳು ಪ್ರಕಟಿಸಿ ವಿತರಿಸುವ ಕರಪತ್ರಗಳನ್ನು ಐ.ಸಿ.ಟಿಯ ಮೂಲಕ ಪ್ರದರ್ಶಿಸುವುದು. ಅವುಗಳ ಪರಿಶೀಲನೆ ಮತ್ತು ತರಗತಿ ಚರ್ಚೆಯ ಬಳಿಕ ವಿದ್ಯಾರ್ಥಿಗಳು ಗುಂಪುಗಳಲ್ಲಿ ಕುಳಿತು ಬಡತನದ ಸಮಸ್ಯೆಯಿಂದ ಬಳಲುತ್ತಿರುವ ಕುಟುಂಬದ ಕುರಿತು ಕರಪತ್ರಗಳನ್ನು ತಯಾರಿಸಲಿ. ಆಯ್ದ ವಿದ್ಯಾರ್ಥಿಗಳು ತರಗತಿಯಲ್ಲಿ ಮಂಡಿಸಲಿ. ಅಧ್ಯಾಪಕರು ಸೂಕ್ತ ಮಾರ್ಗದರ್ಶ ನೀಡುವುದು.

- ಕರಪತ್ರವನ್ನು ಹೀಗೂ ಬರೆಯಬಹುದು.

## ಕಂಬನಿ ಒರೆಸುವ ಕೈಗಳಾಗೋಣ

ಸಹೃದಯರೇ,

ಭಾರತವು ಅಭಿವೃದ್ಧಿ ಹೊಂದಿದ ಪ್ರಬಲ ರಾಷ್ಟ್ರಗಳಲ್ಲಿ ಒಂದಾಗಿದೆ. ವೈಜ್ಞಾನಿಕವಾಗಿಯೂ, ಸಾಮಾಜಿಕವಾಗಿಯೂ, ಆರ್ಥಿಕವಾಗಿಯೂ ಎಷ್ಟೇ ಮುಂದುವರಿದರೂ ಕೂಡ ಕೆಲವೊಂದು ಕಡೆ ಬಡತನದ ಕತ್ತಲಲ್ಲೇ ಬದುಕುವ ಕುಟುಂಬಗಳು ಇನ್ನೂ ಇವೆ. ಅಂತೆಯೇ ನಮ್ಮೂರಿನಲ್ಲಿರುವ ಸೂರಪ್ಪನವರ ಕುಟುಂಬವು ಬಡತನದ ಸಮಸ್ಯೆಯಿಂದ ಬಳಲುತ್ತಿರುವುದು ನಮಗೆಲ್ಲರಿಗೂ ತಿಳಿದಿರುವ ವಿಚಾರ. ಕಳೆದ ಮಳೆಗಾಲದಲ್ಲಿ ಸುರಿದ ಧಾರಾಕಾರ ಮಳೆಗೆ ಅವರು ವಾಸಿಸುತ್ತಿದ್ದ ಸಣ್ಣ ಗುಡಿಸಲೂ ಸಹ ನೆಲಕಚ್ಚಿದೆ. ಇದರಿಂದಾಗಿ ಮಕ್ಕಳ ವಿದ್ಯಾಭ್ಯಾಸವು ಅರ್ಧಕ್ಕೆ ಮೊಟಕುಗೊಂಡಿದೆ. ಇಂತಹ ಸಂದರ್ಭದಲ್ಲಿ ವಾಸಯೋಗ್ಯವಾದ ಮನೆಯಿಲ್ಲದೆ, ಮಕ್ಕಳಿಗೆ ವಿದ್ಯಾಭ್ಯಾಸವನ್ನು ನೀಡಲು ಸಾಧ್ಯವಿಲ್ಲದೆ ಕಣ್ಣೀರಿನಲ್ಲಿ ಕೈತೊಳೆಯುತ್ತಿರುವ ಈ ಕುಟುಂಬಕ್ಕೆ ಮಾನವೀಯತೆಯ ನೆಲೆಯಿಂದ ಸಹಾಯ ಹಸ್ತವನ್ನು ಚಾಚುವುದು ನಮ್ಮೆಲ್ಲರ ಕರ್ತವ್ಯ. ಆದುದರಿಂದ ನಮ್ಮ ಸಹೋದರರನ್ನು ಕಷ್ಟದಿಂದ ಮೇಲೆತ್ತಲು, ತನುಮನಧನಗಳ ಸಹಾಯವನ್ನು ಮಾಡಲು ನಾವು ತಯಾರಾಗಬೇಕಾಗಿದೆ. ಈ ಒಂದು ಪುಣ್ಯಕಾರ್ಯದಲ್ಲಿ ತಾವೆಲ್ಲರೂ ತುಂಬು ಮನಸ್ಸಿನಿಂದ ಭಾಗಿಗಳಾಗಿ ನಮ್ಮೊಂದಿಗೆ ಸಹಕರಿಸಬೇಕಾಗಿ ಕಳಕಳಿಯಿಂದ ವಿನಂತಿಸಿಕೊಳ್ಳುತ್ತಿದ್ದೇವೆ.

" ಜನಸೇವೆಯೇ ಜನಾರ್ದನನ ಸೇವೆ"

ಸ್ಥಳ : ಹಲಗೆರೆಪುರ

ದಿನಾಂಕ : 28.1.2019 ನಾಗರಿಕರು

### ◘ ಮನವಿ ಪತ್ರ ಬರೆಯುವುದು

ಮಾದೇವಿ ಮತ್ತು ಸವಿತಾರಂತಹ ಮಕ್ಕಳು ಹಳ್ಳಿಯಲ್ಲಿ ಸರಕಾರಿ ಪ್ರೌಢಶಾಲೆ ಇಲ್ಲದಿರುವುದರಿಂದ ಶಿಕ್ಷಣದಿಂದ ವಂಚಿತರಾಗಿದ್ದಾರೆ. ಆ ಹಳ್ಳಿಯಲ್ಲಿನ ಬಡಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸರಕಾರಿ ಪ್ರೌಢಶಾಲೆಯೊಂದನ್ನು ಸ್ಥಾಪಿಸಬೇಕೆಂದು ಕೇಳಿಕೊಂಡು ಜಿಲ್ಲಾ ಪಂಚಾಯತು ಅಧ್ಯಕ್ಷರಿಗೆ ಮನವಿ ಪತ್ರವೊಂದನ್ನು ಬರೆಯಿರಿ.

ಮನವಿ ಪತ್ರ ಬರೆಯುವ ಹಂತಗಳನ್ನು ವಿದ್ಯಾರ್ಥಿಗಳು ಈಗಾಗಲೇ ಹಿಂದಿನ ತರಗತಿಗಳಲ್ಲಿ ತಿಳಿದಿರುತ್ತಾರೆ. ಆ ಹಂತಗಳನ್ನು ಅಧ್ಯಾಪಕರು ಮತ್ತೊಮ್ಮೆ ನೆನಪಿಸಿ ಕರಿಹಲಗೆಯಲ್ಲಿ ಬರೆಯುವುದು. ಅದರ ಆಧಾರದಲ್ಲಿ ವಿದ್ಯಾರ್ಥಿಗಳು ಗುಂಪಿನಲ್ಲಿ ಕುಳಿತು ಮನವಿ ಪತ್ರವನ್ನು ಬರೆಯಲಿ. ಪ್ರತಿ ಗುಂಪಿನಿಂದ ಒಬ್ಬರು ಮಂಡಿಸಲು ಅವಕಾಶ ನೀಡುವುದು. ತಪ್ಪಿದಲ್ಲಿ ಸರಿಪಡಿಸಿ ಚಟುವಟಿಕೆ ಪುಸ್ತಕದಲ್ಲಿ ಬರೆಯಲಿ.

- ಮನವಿ ಪತ್ರ ಹೀಗೂ ಬರೆಯಬಹುದು.

## ಮನವಿ ಪತ್ರ

ಇವರಿಂದ,

ವಿದ್ಯಾರ್ಥಿಗಳು,
ಸರಕಾರಿ ಹಿರಿಯ ಪ್ರಾಥಮಿಕ ಶಾಲೆ
ಹಲಗೆರೆಪುರ

ಇವರಿಗೆ,

ಅಧ್ಯಕ್ಷರು,
ಜಿಲ್ಲಾ ಪಂಚಾಯತು
ಮದ್ದೂರು

ಮಾನ್ಯರೇ,

ವಿಷಯ : ಹಳ್ಳಿಯಲ್ಲಿ ಪ್ರೌಢಶಾಲೆಯೊಂದನ್ನು ಸ್ಥಾಪಿಸುವ ಬಗ್ಗೆ.

ನಮ್ಮ ಹಳ್ಳಿಯಲ್ಲಿ ಸರಕಾರಿ ಪ್ರಾಥಮಿಕ ಶಾಲೆ ಮಾತ್ರವಿದ್ದು ಪ್ರೌಢಶಾಲೆ ಇಲ್ಲದ ಕಾರಣ ನಮ್ಮೂರಿನ ಬಡ ವಿದ್ಯಾರ್ಥಿಗಳ ಹೆಚ್ಚಿನ ವ್ಯಾಸಂಗಕ್ಕೆ ತೊಂದರೆ ಉಂಟಾಗಿದೆ. ಖಾಸಗಿ ವಿದ್ಯಾಸಂಸ್ಥೆಗಳಲ್ಲಿ ಶಿಕ್ಷಣವು ದುಬಾರಿಯಾದುದರಿಂದ ಬಡ ಪ್ರತಿಭಾವಂತ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಆದುದರಿಂದ ತಾವು ದಯಮಾಡಿ ನಮ್ಮ ಹಳ್ಳಿಯಲ್ಲೊಂದು ಸರಕಾರಿ ಪ್ರೌಢಶಾಲೆಯನ್ನು ಸ್ಥಾಪಿಸಿ ಬಡ ಮಕ್ಕಳಿಗೂ ಕೂಡ ಉನ್ನತ ವಿದ್ಯಾಭ್ಯಾಸವು ಕೈಗೆಟಕುವಂತೆ ಮಾಡಬೇಕಾಗಿ ಕಳಕಳಿಯಿಂದ ವಿನಂತಿಸುತ್ತಿದ್ದೇವೆ.

ವಂದನೆಗಳೊಂದಿಗೆ,

ಸ್ಥಳ : ಹಲಗೆರೆಪುರ
ದಿನಾಂಕ : 25/1/2019

ಇತಿ,
ವಿದ್ಯಾರ್ಥಿಗಳು
ಸರಕಾರಿ ಹಿರಿಯ ಪ್ರಾಥಮಿಕ ಶಾಲೆ
ಹಲಗೆರೆಪುರ

***

## ಪ್ರಬಂಧ ಬರೆಯುವುದು

ಹಿಂದಿನ ತರಗತಿಗಳಲ್ಲಿ ವಿದ್ಯಾರ್ಥಿಗಳು ಪ್ರಬಂಧ ಬರೆಯುವ ಕ್ರಮವನ್ನು ತಿಳಿದಿರುತ್ತಾರೆ. ಇದರ ಆಧಾರದಲ್ಲಿ ಪಾಠಭಾಗದ ಆಶಯವನ್ನು ವಿಶ್ಲೇಷಿಸಿ 'ಶಿಕ್ಷಣದ ಮಹತ್ವ' ಎಂಬ ವಿಚಾರದ ಕುರಿತು ಪ್ರಬಂಧ ಬರೆಯಲು ಹೇಳುವುದು. ಗುಂಪಿನಲ್ಲಿ ಕುಳಿತು ಚರ್ಚಿಸಿ ಪ್ರಬಂಧವನ್ನು ಬರೆಯಲಿ. ಗುಂಪಿಗೊಬ್ಬರಂತೆ ಮಂಡಿಸಲಿ. ಅಗತ್ಯವಿದ್ದಲ್ಲಿ ಅಧ್ಯಾಪಕರು ಸೂಕ್ತ ಪರಿಷ್ಕರಣೆ ಮಾಡುವುದು. ಬಳಿಕ ಕ್ರೋಡೀಕರಿಸಿ ಪ್ರಬಂಧ ಬರೆಯಲಿ.

ಪೂರಕ ಓದಿಗಾಗಿ ಡಾ। ಮಹಾಬಲೇಶ್ವರ ರಾವ್ ಅವರು ಬರೆದ ಶಿಕ್ಷಣದ ಮಹತ್ವದ ಕುರಿತಾದ ಪುಸ್ತಕವನ್ನು ನೀಡುವುದು.

ಪ್ರಬಂಧ ಹೀಗೂ ಬರೆಯಬಹುದಲ್ಲವೇ?

### ಶಿಕ್ಷಣದ ಮಹತ್ವ

ಒಬ್ಬ ವ್ಯಕ್ತಿಯು ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸುವುದೇ ಶಿಕ್ಷಣ. ಜೀವನದಲ್ಲಿ ಒಬ್ಬ ವ್ಯಕ್ತಿ ತನ್ನ ಕಾಲಿನ ಮೇಲೆ ತಾನು ನಿಂತುಕೊಳ್ಳುವ ಸಾಮರ್ಥ್ಯವನ್ನು ಯಾವುದು ನೀಡುತ್ತದೋ ಅದು ಶಿಕ್ಷಣ ಎಂಬುದು ಶಿಕ್ಷಣಕ್ಕೆ ವಿವೇಕಾನಂದರು ನೀಡಿದ ವ್ಯಾಖ್ಯೆಯಾಗಿದೆ. ಅಂದರೆ ಶಿಕ್ಷಣದ ಉದ್ದೇಶವು ವ್ಯಕ್ತಿತ್ವ ರೂಪೀಕರಣ ಹಾಗೂ ಸ್ವಾವಲಂಬನೆ ಎಂದು ಅರ್ಥೈಸಿಕೊಳ್ಳಬಹುದು. ಸಮಾನತೆ ಮತ್ತು ಸಾಮಾಜಿಕ, ಆರ್ಥಿಕ ನ್ಯಾಯವು ನಾಗರಿಕರಿಗೆ ಇನ್ನೂ ದೂರದ ಕನಸಾಗಿದೆ. ಈ ಪರಮಾದರ್ಶ ಗುರಿಯನ್ನು ನನಸಾಗಿಸಲು ನಮ್ಮ ದೇಶಕ್ಕೆ ಅಗತ್ಯವಾಗಿರುವುದರಲ್ಲೇ ಶಿಕ್ಷಣದ ಮಹತ್ವವು ಅಡಗಿದೆ.

ಶಾಲೆಗಳು ನಮ್ಮ ಮಕ್ಕಳಲ್ಲಿ ಪ್ರಶ್ನಿಸುವ, ನೋಡುವ ಮತ್ತು ಸುಧಾರಣೆಯನ್ನು ತರುವ ಹುಮ್ಮಸ್ಸನ್ನು ಮೈಗೂಡಿಸುತ್ತದೆ. ಇಂದಿನ ಶಾಲೆಗಳು ಮುಂದಿನ ಸಮಾಜದ ಪ್ರತಿಬಿಂಬಗಳು ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ. ಬಡತನ ಮತ್ತು ಅಸಮಾನತೆಯ ಕೆಸರಿನಿಂದ ಇಡೀ ದೇಶವನ್ನು ಮೇಲೆತ್ತುವ ಹಾಗೂ ವಿವಿಧತೆಯಲ್ಲೂ ಸಾಮರಸ್ಯವನ್ನು ಸಾಧಿಸುವ, ಸರ್ವಸಮಾನತೆಯ ಸಮಾಜ ನಿರ್ಮಾಣ ಮಾಡುವ ಸಾಧ್ಯತೆ ಇರುವುದು ಶಿಕ್ಷಣಕ್ಕೆ ಮಾತ್ರ.

ಶಿಕ್ಷಣದ ಗುರಿ ಕೇವಲ ನೌಕರಿ ಸಂಪಾದಿಸುವುದಷ್ಟೇ ಅಲ್ಲ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕಿದೆ. ಶಿಕ್ಷಣವು ವಿದ್ಯಾರ್ಥಿಯಲ್ಲಿರುವ ಸುಪ್ತ ಪ್ರತಿಭೆಯನ್ನು ಹೊರತರುವುದರೊಂದಿಗೆ ಹೊರಗಿನ ಭೌತಿಕ ಮತ್ತು ವಾಸ್ತವಿಕ ಅಂಶಗಳನ್ನು ನೆನಪಿಸುತ್ತದೆ. ವಿದ್ಯಾರ್ಥಿಗಳು ಸ್ವಾವಲಂಬಿಗಳಾಗಿ ತಮ್ಮ ಜೀವನ ನಡೆಸುವಷ್ಟು ಸಾಮರ್ಥ್ಯವನ್ನು ಗಳಿಸಿಕೊಳ್ಳಲು ಶಿಕ್ಷಣವು ಸಹಾಯ ಮಾಡುವಂತಿರಬೇಕು. ನಮ್ಮ ಶಾಲಾ ಕಾಲೇಜುಗಳಲ್ಲಿ ಮತ್ತು ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳ ವ್ಯಕ್ತಿತ್ವನ್ನು ರೂಪಿಸುವಂತಹ, ಅವರು ತಮ್ಮ ಜೀವನದ ಸತ್ಯವನ್ನು ಧೈರ್ಯ ಹಾಗೂ ಭರವಸೆಯಿಂದ ಎದುರಿಸುವಂತಹ ಶಿಕ್ಷಣವನ್ನು ನೀಡಬೇಕು.

'ಶಿಕ್ಷಣ' ಎಂದ ಕೂಡಲೇ ಹೆಚ್ಚಿನವರು 'ಔಪಚಾರಿಕ ಶಿಕ್ಷಣ'ವನ್ನು ಉದ್ದೇಶಿಸುತ್ತಾರೆ. ಆದರೆ ಕೇವಲ ನಾಲ್ಕು ಗೋಡೆಯ ಮಧ್ಯದಲ್ಲಿ ಅಕ್ಷರ ಜ್ಞಾನವನ್ನು ನೀಡುವುದು ಮಾತ್ರವಲ್ಲ, ಜೀವನದಲ್ಲಿ ಹೇಗೆ ಮುಂದುವರಿಯಬೇಕು. ಸಮಾಜದಲ್ಲಿ ಒಬ್ಬ ಉತ್ತಮ ವ್ಯಕ್ತಿ ತನ್ನ ಸರ್ವತೋಮುಖ ಬೆಳವಣಿಗೆಯೊಂದಿಗೆ ರಾಷ್ಟ್ರಪ್ರೇಮ, ಮಾನವ ಪ್ರೇಮ, ಪರೋಪಕಾರ ಬುದ್ಧಿ ಎಂಬಿತ್ಯಾದಿ ವಿಚಾರಗಳನ್ನು ತಿಳಿದೋ ತಿಳಿಯದೆಯೋ ತಿಳಿಸುವುದು ಶಿಕ್ಷಣವಾಗಿದೆ.

'ಹಚ್ಚೋಣ ಹಣತೆಗಳ...' ಪಾಠದಲ್ಲಿ ಮಾದೇವಿ ಹಾಗೂ ಅವಳ ತಮ್ಮನಂತಹ ಬಡಮಕ್ಕಳಿಗೆ ಪ್ರಾಥಮಿಕ ಶಿಕ್ಷಣ ಲಭ್ಯವಾದರೂ ಪ್ರೌಢಶಾಲಾ ಹಂತದ ಶಿಕ್ಷಣಕ್ಕೆ ಅವರ ಆರ್ಥಿಕ ತೊಂದರೆಯು ಅಡ್ಡಿ ಬಂದು ಅವರ ಜೀವನವು ಕತ್ತಲಿನಲ್ಲಿ  ಸರಿದು ಹೋಗುವಂತಾಯಿತು. ಆಗ ಆ ಊರಿನವರು ವಿವಿಧ ರೀತಿಯಲ್ಲಿ ಅವರಿಗೆ ಸಹಾಯ ಮಾಡಿ ಅವರನ್ನು ಮೇಲೆತ್ತುವ ಪ್ರಯತ್ನವನ್ನು ಮಾಡಿದರು.

ಮಾದೇವಿಯಂತೆ ನಮ್ಮ ಸಮಾಜದಲ್ಲಿ ಶಿಕ್ಷಣದಿಂದ ವಂಚಿತರಾಗಿ ಕತ್ತಲಿನಲ್ಲಿ ಜೀವನ ಸಾಗಿಸುವ ಎಷ್ಟೋ ಕುಟುಂಬಗಳಿವೆ. ಸಮಾಜದಲ್ಲಿ ಉನ್ನತ ಸ್ಥಾನದಲ್ಲಿರುವ ಕುಟುಂಬಗಳು ಇಂತಹ ಕುಟುಂಬಗಳಿಗೆ ಶಿಕ್ಷಣವನ್ನು ಪಡೆಯಲು ಸಹಾಯ ಮಾಡಿದರೆ ಅವರು ಸ್ವಾವಲಂಬಿಗಳಾಗುವರಲ್ಲದೆ, ಮುಂದಿನ ಪೀಳಿಗೆಯು ಕತ್ತಲಿನಿಂದ ಬೆಳಕಿನೆಡೆಗೆ ಬರುವುದು ಸುಲಭ ಸಾಧ್ಯವಾಗುತ್ತದೆ. ಆದುದರಿಂದ ಸಮಾಜದಲ್ಲಿರುವ ಅಸಹಾಯಕರನ್ನು ಮೇಲೆತ್ತಲು ಅವರ ಜೀವನವನ್ನು ಬೆಳಗಿಸಲು ಆರ್ಥಿಕವಾಗಿ ಸಬಲರಾಗಿರುವವರು ಮನಸ್ಸು ಮಾಡಬೇಕು. ಆ ಮೂಲಕ ಸುದೃಢವಾದ ಸ್ವಾವಲಂಬಿ ಸಮಾಜವನ್ನು ನಿರ್ಮಿಸಲು ಸಾಧ್ಯ.

***

## ಬೆಳಕು ಹಿಡಿದವರು

- **ಟಿಪ್ಪಣಿ ಬರೆಯುವುದು**

ಬೆಳಕು ಹಿಡಿದವರು

ಬೆಳದಿಂಗಳಲ್ಲಿ ಸುಖಪಡುವುದಿಲ್ಲ

ಹಗಲೆಲ್ಲ ಮರಳ ತಡಿಯಲ್ಲಿ ಕಾದು

ಬಸವಳಿದು ಜೀವಗಳಿಗೆ ನೀರುಣಿಸುತ್ತಾರೆ

ಮೇಲಿನ ಸಾಲುಗಳಲ್ಲಿ ವ್ಯಕ್ತವಾಗುವ ಆಶಯಗಳ ಆಧಾರದಲ್ಲಿ ತಮ್ಮ ಜೀವನವನ್ನು ಸಮಾಜ ಸುಧಾರಣೆಗಾಗಿ ಮುಡಿಪಾಗಿಟ್ಟ ಮಹಾಪುರುಷರೊಬ್ಬರ ಸಾಧನೆಗಳನ್ನು ವಿಶ್ಲೇಷಿಸಿ ಟಿಪ್ಪಣಿ ಬರೆಯಿರಿ.

(ಉದಾ : ಮಹಾತ್ಮ ಗಾಂಧೀಜಿ, ಬಸವಣ್ಣ, ನಾರಾಯಣ ಗುರು, ಮದರ್ ತೆರೆಸಾ..)

ಸಮಾಜವನ್ನು ಸುಧಾರಿಸಲು ಪ್ರಯತ್ನಿಸಿದ ಮಹಾಪುರುಷರನ್ನು ಹೆಸರಿಸಲು ಹೇಳುವುದು. ಬಂದ ಉತ್ತರವನ್ನು ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ಆ ಬಳಿಕ ಇಂತಹ ಮಹಾಪುರುಷರಲ್ಲೊಬ್ಬರಾದ ಬಸವಣ್ಣನವರ ಕುರಿತಾದ ವೀಡಿಯೋ ಕ್ಲಿಪಿಂಗ್‌ನ್ನು ಪ್ರದರ್ಶಿಸುವುದು. ಬಸವಣ್ಣನವರ ಬಾಲ್ಯ, ತಂದೆ–ತಾಯಿ, ಸಾಧನೆಗಳ ಕುರಿತು ಕೆಲವೊಂದು ಪ್ರಶ್ನೆಗಳನ್ನು ಕೇಳುವುದು. ಆ ಮೇಲೆ ವೀಡಿಯೋ ಕ್ಲಿಪಿಂಗ್‌ನ ಆಧಾರದಲ್ಲಿ ಬಸವಣ್ಣನವರ ಜೀವನ ಹಾಗೂ ಸಾಧನೆಗಳನ್ನು ಬರೆಯಲು ಹೇಳುವುದು. ಆಯ್ದ ಕೆಲವು ವಿದ್ಯಾರ್ಥಿಗಳು ಮಂಡಿಸಲಿ, ಅಗತ್ಯವಿದ್ದಲ್ಲಿ ಅಧ್ಯಾಪಕರು ಸೂಕ್ತ ಸಲಹೆಗಳನ್ನು ನೀಡುವುದು.

**Life story of basanna video cliping - https://youtu.be/RGMs2pgazjo**

ಟಿಪ್ಪಣಿ ಹೀಗೂ ಬರೆಯಬಹುದಲ್ಲವೇ ?

**ಬಸವಣ್ಣ**

ಬಸವಣ್ಣನವರು ಹನ್ನೆರಡನೆಯ ಶತಮಾನದಲ್ಲಿದ್ದ ವಚನಕಾರರು. ವಿಜಯಪುರ ಜಿಲ್ಲೆಯ ಬಾಗೇವಾಡಿಯಲ್ಲಿ ಜನಿಸಿದ ಇವರ ತಂದೆ ಮಾದರಸ, ತಾಯಿ ಮಾದಲಾಂಬಿಕೆ. ಇವರು ಕಲಚೂರಿ ಅರಸ ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಯಾಗಿದ್ದರು ಮತ್ತು ಸಮಾಜ ಸುಧಾರಕರಾಗಿದ್ದರು. ಬಸವಣ್ಣ ವಚನಗಳ ಮೂಲಕ ಸಾಮಾಜಿಕ ಅರಿವು ಮೂಡಿಸಲು ಹಾಗೂ ಸಮಾಜದಲ್ಲಿದ್ದ ಲಿಂಗ ಅಸಮಾನತೆ, ಸಾಮಾಜಿಕ ತಾರತಮ್ಯ, ಮೂಢನಂಬಿಕೆಗಳನ್ನು ನಿವಾರಿಸಲು ಶ್ರಮಿಸಿದರು.

ಮಹಾತ್ಮರಾದ ಬಸವಣ್ಣನವರು ಕಟ್ಟಬಯಸಿದ್ದು ಸರ್ವಶೋಷಣೆಗಳಿಂದಲೂ ಮುಕ್ತವಾದ ಸ್ವಾತಂತ್ರ್ಯ, ಸಮಾನತೆ, ಸೌಹಾರ್ದಗಳ ಅಡಿಗಲ್ಲಿನ ಮೇಲೆ ನಿಂತ, ಸರ್ವೋದಯ ನಿಷ್ಠವಾದ ಒಂದು ಆದರ್ಶ ಸಮಾಜ. ಅವರ ಪ್ರಕಾರ ಧರ್ಮವೆಂದರೆ ಅಗ್ರಾಹ್ಯವಾದ ಅನನುಸರಣೀಯವಾದ ಜಟಿಲ ಜಾಲವೂ ಅಲ್ಲ, ಒಂದು ವರ್ಗದ ಸೊತ್ತೂ ಅಲ್ಲ. ಅದು ಎಲ್ಲರ ಆಸ್ತಿಯಾಗುವುದರೊಂದಿಗೆ ಪ್ರತಿಯೊಬ್ಬರ ಸುಖಕ್ಕೂ ಅಭ್ಯುದಯಕ್ಕೂ ಕಾರಣವಾಗಬೇಕು. ಬಸವಣ್ಣನವರು ಹಿಂದೂ ಧರ್ಮದ ಚೌಕಟ್ಟಿನೊಳಗಿದ್ದುಕೊಂಡೇ ಅದನ್ನು ಶುದ್ಧೀಕರಿಸುವ, ತನ್ಮೂಲಕ ಸಮಾಜವನ್ನು ಮೇಲೆತ್ತುವ ಮಹಾಕಾರ್ಯದಲ್ಲಿ ಉದ್ಯುಕ್ತರಾದರು. ಅವರ ಕಾಲದಲ್ಲಿ ಸಾಮಾನ್ಯ ಜನ ಅಜ್ಞಾನ, ಮೌಢ್ಯ, ಶೋಷಣೆಗಳಿಗೆ ಪಕ್ಕಾಗಿ ಉದ್ಧಾರ ಕಾಣದೆ ಕತ್ತಲಲ್ಲಿ ತೊಳಲಾಡುತ್ತಿದ್ದರು. ಬಸವಣ್ಣನವರು ಈ ಶೋಚನೀಯ ಪರಿಸ್ಥಿತಿಯನ್ನು ತಪ್ಪಿಸಲು ಜೀವನ ಪರ್ಯಂತ ಹೆಣಗಿದರು. ಧರ್ಮವನ್ನು ಅವರು ಕರ್ಮಕಾಂಡದಿಂದ ಪ್ರತ್ಯೇಕಿಸಿ, ಅದರ ನೈಜವಾದ ತಿರುಳನ್ನು ಜನತೆಯ ಮುಂದಿರಿಸಿದರು. ಇದರಿಂದ ಸಮಾಜದಲ್ಲಿ ಅಪೂರ್ವ ಜಾಗೃತಿಯುಂಟಾಯಿತು. ಜನರ ಜಾಡ್ಯ ಅಜ್ಞಾನಗಳು ತೊಲಗಿಹೋದವು. ಅವರು ಜಾತಿಗಳ ಅಡ್ಡಗೋಡೆಗಳನ್ನು ಕುಟ್ಟಿ ಕೆಡವಲು ತಮ್ಮ ಸರ್ವಶಕ್ತಿಯನ್ನೂ ವಿನಿಯೋಗಿಸಿದ ಮಹಾನುಭಾವರು.

ಅಸ್ಪೃಶ್ಯತೆ ಹಿಂದೂ ಧರ್ಮಕ್ಕಂಟಿದ ಮತ್ತೊಂದು ಲಜ್ಜಾಸ್ಪದ ಕಳಂಕ; ಅದನ್ನು ತೊಡೆದು ಹಾಕುವುದೂ ಬಸವಣ್ಣನವರ ಜೀವಿತೋದ್ದೇಶವಾಗಿತ್ತು. ಅವರು ಆ ಕಾಲದ ಸಮಾಜದಲ್ಲಿದ್ದ ಪ್ರಾಣಿಬಲಿಯನ್ನು ಅಲ್ಲಗಳೆದು,

ಅಹಿಂಸೆ–ದಯೆಗಳ ಆವಶ್ಯಕತೆಯನ್ನು ಒತ್ತಿ ಹೇಳಿದರು. "ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ ; ಆಚಾರವೇ ಸ್ವರ್ಗ, ಅನಾಚಾರವೇ ನರಕ," ಎಂದು ಧರ್ಮಕ್ಕೆ ಹೊಸ ವ್ಯಾಖ್ಯೆಯನ್ನೇ ಅವರು ನೀಡಿದರು. " ದೇವನೊಬ್ಬ ನಾಮ ಹಲವು" ಎಂಬ ಸೂತ್ರದಂತೆ ಏಕದೇವೋಪಾಸನೆಯನ್ನು ಪ್ರತಿಪಾದಿಸಿದ ಬಸವಣ್ಣನವರು ಮೂಢನಂಬಿಕೆಗಳ ಮೇಲೆ ಗದಾಪ್ರಹಾರ ಮಾಡಿದರು.

"ಕಾಯಕವೇ ಕೈಲಾಸ" ಎಂಬ ಮಂತ್ರದಂತೆ ಕಾಯಕಕ್ಕೆ ಬಸವಣ್ಣನವರಿತ್ತ ಪ್ರಾಧಾನ್ಯ ಅತ್ಯಂತ ಗಮನಾರ್ಹವಾದುದು. ಪ್ರತಿಯೊಂದು ಕೆಲಸಕ್ಕೂ ಅದರದೇ ಆದ ಮಹತ್ವವಿದೆ. ಸಮಾಜದ ಅಸಮಾನತೆ, ದಾರಿದ್ರ್ಯಗಳನ್ನು ನಿವಾರಿಸುವ ಏಕೈಕ ಮಂತ್ರವೇ ಈ ಕಾಯಕತತ್ವ.

ಬಸವಣ್ಣನವರು ಭೌತಿಕವಾಗಿ ಎಂಟುನೂರು ವರ್ಷಗಳಷ್ಟು ಹಿಂದಿನವರಾದರೂ ಬೌದ್ಧಿಕವಾಗಿ ಅವರ ತತ್ವಗಳು ಸಾರ್ವಕಾಲಿಕ ಮಹತ್ವವನ್ನು ಪಡೆದುಕೊಳ್ಳುತ್ತದೆ. ಆ ಮೂಲಕ ಬಸವಣ್ಣನವರು ಅಂದಿಗೂ, ಇಂದಿಗೂ, ಎಂದಿಗೂ ಸಲ್ಲುವ ಆದರ್ಶ ಸಮಾಜದ ಪರಿಕಲ್ಪನೆಯ ಹರಿಕಾರರಾಗಿದ್ದಾರೆ.

***

ಘಟಕ 2

# ಗ್ರಾಮೀಣ ಸೊಗಡು

# ಘಟಕ – 2

# ಗ್ರಾಮೀಣ ಸೊಗಡು

## ಮೊಸರಿನ ಮಂಗಮ್ಮ

### ❋ ಪ್ರಬಂಧ ಬರೆಯಿರಿ.

ಕೌಟುಂಬಿಕ ಸಾಮರಸ್ಯದ ಕುರಿತಿರುವ ಕಥೆ, ಲೇಖನ, ಪ್ರಬಂಧ ಇತ್ಯಾದಿಗಳನ್ನು ವಿದ್ಯಾರ್ಥಿಗಳಲ್ಲಿ ಸಂಗ್ರಹಿಸಲು ಹೇಳುವುದು. ಶಾಲಾ ಗ್ರಂಥಾಲಯ, ವಾರಪತ್ರಿಕೆ, ದಿನಪತ್ರಿಕೆ, ಅಂತರ್ಜಾಲವನ್ನು ಸದುಪಯೋಗಪಡಿಸಲು ತಿಳಿಸುವುದು. ಮರುದಿನ ವಿದ್ಯಾರ್ಥಿಗಳು ತರಗತಿಯಲ್ಲಿ ಈ ವಿಚಾರದ ಕುರಿತು ಚರ್ಚಿಸಲಿ.

- ಸಾಮರಸ್ಯ ಎಂದರೇನು?
- ಕೌಟುಂಬಿಕ ಸಾಮರಸ್ಯ ಎಂದರೇನು?
- ಕುಟುಂಬದ ಸದಸ್ಯರಲ್ಲಿ ಪರಸ್ಪರ ಸಾಮರಸ್ಯವಿಲ್ಲದಿದ್ದರೆ ಏನಾಗಬಹುದು?
- ಕೌಟುಂಬಿಕ ಸಾಮರಸ್ಯ ಕಾಪಾಡುವುದು ಹೇಗೆ?
- 

ಇತ್ಯಾದಿ ವಿಚಾರಗಳು ಚರ್ಚೆಯಲ್ಲಿ ಒಳಗೊಂಡಿರಬೇಕು. ಇದಕ್ಕೆ ಪೂರಕವಾದ ಮಹಾಭಾರತ, ಐತಿಹಾಸಿಕ, ಚಲನಚಿತ್ರ ಕತೆಗಳನ್ನು ಅಧ್ಯಾಪಕರು ಹೇಳುವುದು. ಇದರ ಆಧಾರದಲ್ಲಿ ಕೌಟುಂಬಿಕ ಸಾಮರಸ್ಯದ ಕುರಿತು ವೈಯಕ್ತಿಕವಾಗಿ ಪ್ರಬಂಧ ಬರೆಯಲು ತಿಳಿಸುವುದು. ಪೀಠಿಕೆ, ವಿಷಯ ವಿಸ್ತಾರ, ಉಪಸಂಹಾರ ಇತ್ಯಾದಿ ಕ್ರಮದಲ್ಲಿ ಪ್ರಬಂಧ ಸ್ವರೂಪದಲ್ಲಿ ಬರೆಯಲಿ. ಬಳಿಕ ತರಗತಿಯಲ್ಲಿ ನಡೆಯುವ ವಿಚಾರಗೋಷ್ಠಿಯಲ್ಲಿ ಮಂಡಿಸಲಿ.

### ◻ ಪ್ರಬಂಧ ಹೀಗೂ ಬರೆಯಬಹುದಲ್ಲವೇ?

ನಮ್ಮ ಸುತ್ತಲೂ ಇರುವ ಗಿಡಮರಗಳು, ಪ್ರಾಣಿ ಪಕ್ಷಿಗಳು ಒಂದರೊಡನ್ನೊಂದು ಹೊಂದಿಕೊಂಡಿರುವುದು ಪ್ರಕೃತಿ ಸಹಜವಾದುದು. ಈ ಸಹಕಾರವನ್ನೇ ಬೆಳೆಸಿಕೊಂಡು ಸಾಮರಸ್ಯ, ಸಹಬಾಳ್ವೆಯ ಮನೋಭಾವದಿಂದ ಬಾಳಿದಾಗ ಬಾಳು ನೆಮ್ಮದಿಯನ್ನು ಪಡೆಯುತ್ತದೆ. ತಮ್ಮ ತಮ್ಮ ಕುಟುಂಬದಲ್ಲಿಯೂ, ಕೆಲಸವನ್ನು ಸರಿಸಮವಾಗಿ ಹಂಚಿಕೊಂಡು ಒಬ್ಬರಿಗೊಬ್ಬರು ಸಹಕರಿಸಿಕೊಂಡು ಹೋದರೆ ಎಂತಹ ಕುಟುಂಬದಲ್ಲಿಯೂ ಶಾಂತಿ, ಸಮಾಧಾನ, ಸಂತೋಷ ಎಂಬಿವು ನೆಲೆ ನಿಲ್ಲಲು ಸಾಧ್ಯ. ಅಂತಹ ಕುಟುಂಬವನ್ನು ನೋಡಿ ಇತರರು ಅದರಂತೆ ತಮ್ಮ ಕುಟುಂಬವನ್ನೂ ಆನಂದಮಯವಾಗುವಂತೆ ಮಾಡಬಹುದು.

ಕುಟುಂಬ ಎಂದ ಮೇಲೆ ಅಲ್ಲಿ ಸಂಬಂಧಗಳ ಪೂರ್ಣತೆಯಂತೂ ಇರಲೇಬೇಕು. ಅಪ್ಪ–ಅಮ್ಮ, ಅಜ್ಜ–ಅಜ್ಜಿ, ಅಣ್ಣ–ತಮ್ಮ, ಅಕ್ಕ–ತಂಗಿ, ಮಾವ–ಅತ್ತೆ, ಬಾವ–ಅತ್ತಿಗೆ, ಚಿಕ್ಕಪ್ಪ–ಚಿಕ್ಕಮ್ಮ, ದೊಡ್ಡಪ್ಪ–ದೊಡ್ಡಮ್ಮ ಇಂಥ ಜೋಡಿ ಜೀವಗಳು ಒಂದೇ ಸೂರಿನಡಿಯಲ್ಲಿ ಬಾಳುವುದು ಜೀವನೋತ್ಸಾಹ, ಹುಮ್ಮಸ್ಸನ್ನು ತರಬಲ್ಲುದು.

ನಮ್ಮ ಹಿರಿಯರು ಅವಿಭಕ್ತತೆಯನ್ನು ಉಸಿರಾಗಿಸಿಕೊಂಡಿದ್ದವರು. ಮನೆಯಲ್ಲಿ ಏನಾದರೂ ಒಡಕು–ತೊಡಕುಗಳು ಬಂದರೆ ತಕ್ಷಣ ಅದನ್ನು ಪರಿಹರಿಸಿ, ಒಂದಾಗಿ ಬಾಳುತ್ತಿದ್ದರು. ಮನೆಯಲ್ಲಿ ಎಂದೂ 'ಎರಡು ಒಲೆ ಉರಿಯಬಾರದೆನ್ನುವ' ಧೋರಣೆಯವರಾಗಿದ್ದರು. ಆದರೆ ಇಂದು ರಕ್ತಸಂಬಂಧಗಳೇ ಎಷ್ಟೋ ಮಂದಿ ಎಲ್ಲೆಲ್ಲೂ ಹರಿದು ಹಂಚಿಹೋಗುತ್ತಿದ್ದಾರೆ. ಅವರು ಕಣ್ಮುಂದೆ ಹಾದು ಹೋದರೂ ಪರಸ್ಪರ ಗುರುತಿಸಲಾಗದಂತಹ ದುಸ್ಥಿತಿ ಇಂದು ಕೆಲವೆಡೆಗಳಲ್ಲಿ ಕಂಡುಬರುತ್ತದೆ.

ಹಿಂದಿನ ಕಾಲದಲ್ಲಿ ಹೆಚ್ಚಿನವು ಅವಿಭಕ್ತ ಕುಟುಂಬಗಳಾಗಿದ್ದವು. ಮನೆಯ ಯಜಮಾನ ಮತ್ತಿತರ ಸದಸ್ಯರು ಪರಸ್ಪರ ಸಹಕಾರ, ಸಾಮರಸ್ಯದಿಂದ ಜೀವನ ಮಾಡುತ್ತಿದ್ದರು. ಆದರೆ ಇಂದು ಹೊಂದಾಣಿಕೆಯ ಕೊರತೆಯಿಂದ ಅವಿಭಕ್ತ ಕುಟುಂಬಗಳು ಕಡಿಮೆಯಾಗುತ್ತಿವೆ. ಅಣು ಕುಟುಂಬಗಳು ಹೆಚ್ಚುತ್ತಿವೆ. ಹೊಂದಾಣಿಕೆ ಇಲ್ಲದಿದ್ದರೆ ಕುಟುಂಬ ಜೀವನ ಸುಗಮವಾಗಿ ಸಾಗಲು ಸಾಧ್ಯವಿಲ್ಲ.

ಇಂದಿನ ವೇಗದ ಬದುಕಿನಲ್ಲಿ ಮನೆ ಮಂದಿ ಪರಸ್ಪರ ಮಾತನಾಡುವುದು, ಕಷ್ಟ ಸುಖಗಳನ್ನು ಹಂಚಿಕೊಳ್ಳುವುದು ಕಡಿಮೆಯಾಗಿದೆ. ಎಲ್ಲರೂ ಅವರವರ ಕೆಲಸಗಳ ಒತ್ತಡದಲ್ಲಿ ದಿನದೂಡುತ್ತಿದ್ದಾರೆ. ಇದರಿಂದ ಮಾನವೀಯ ಸಂಬಂಧಗಳು ಸಡಿಲವಾಗುತ್ತಿವೆ. ಮೊಬೈಲ್ ಫೋನಿನ ಅತಿ ಬಳಕೆ, ದೂರದರ್ಶನ ಧಾರಾವಾಹಿಗಳ ಪ್ರಭಾವ, ಸಮಯ ಪ್ರಜ್ಞೆಯ ಕೊರತೆ, ಇದಕ್ಕೆಲ್ಲ ಕಾರಣವೆನ್ನಬಹುದು. ಹಿರಿಯರನ್ನು ಗೌರವಿಸುವುದು, ಸಹಕಾರ ಮನೋಭಾವ ಇಂದಿನ ಯುವ ಪೀಳಿಗೆಯಲ್ಲಿ ಕಡಿಮೆಯಾಗುತ್ತಿದೆ ಎಂದರೆ ತಪ್ಪಾಗಲಾರದು.

ಕಾಲ ಸರಿದಂತೆ ಸಮಾಜ ಬದಲಾಗುತ್ತಿದೆ; ಹಳ್ಳಿಗಳು ನಗರಗಳಾಗಿ ಮಾರ್ಪಡುತ್ತಿವೆ. ಹಳ್ಳಿಯ ಜನರು ನಗರಗಳತ್ತ ಮುಖ ಮಾಡುತ್ತಿದ್ದಾರೆ. ನೆಮ್ಮದಿಯ ಹಳ್ಳಿ ಜೀವನವನ್ನು ತೊರೆದು ನಗರದ ಫ್ಲಾಟ್ ಸಂಸ್ಕೃತಿಗೆ ಮಾರುಹೋಗುತ್ತಿದ್ದಾರೆ. ಹಳ್ಳಿಗರ ಜೀವನಶೈಲಿಯೂ ಬದಲಾಗುತ್ತಿದೆ. ಹಿಂದಿನ ಜನಪದ ಸಂಸ್ಕೃತಿಯಲ್ಲಿದ್ದ ಕೌಟುಂಬಿಕ ಸಾಮರಸ್ಯ ಇಂದು ಕಡಿಮೆಯಾಗುತ್ತಿದೆ. ಹೆಚ್ಚುತ್ತಿರುವ ವಿವಾಹ ವಿಚ್ಛೇದನಾ ಪ್ರಕರಣಗಳು, ವೃದ್ಧಾಶ್ರಮಗಳು ಇದಕ್ಕೆ ಉದಾಹರಣೆಗಳಾಗಿವೆ.

ಇಡೀ ವಿಶ್ವದಲ್ಲೇ ಭಾರತ ಮಾದರಿಯಾಗಿ ನಿಂತಿರುವುದು ನಾವು ಕಟ್ಟಿಕೊಂಡ ಸುಂದರ ಹಂದರದಲ್ಲಿ ಬೆಳೆಸಿಕೊಂಡು ಬಂದಿರುವ ಈ ಕುಟುಂಬ ವ್ಯವಸ್ಥೆಯಿಂದ. ಆದರೆ ಬದಲಾದ ಕಾಲದ ಧೋರಣೆಯಲ್ಲಿ ಈ ವ್ಯವಸ್ಥೆ ನಲುಗುತ್ತಿರುವುದು ಶೋಚನೀಯ. ಒಂದಿಷ್ಟು ಮಕ್ಕಳಿಗೆ ನೀಡುವ ಸಂಸ್ಕಾರದ ಕೊರತೆ, ಸೌಲಭ್ಯ 'ಅತಿಯಾದ ಆಧುನಿಕತೆಯ ವ್ಯಾಮೋಹಗಳಿಂದಾಗಿ ಕೌಟುಂಬಿಕ ಸಂಬಂಧದಲ್ಲಿ ಸವಕಲು ಉಂಟಾಗಿದೆ. ಆದರೆ ಪರಸ್ಪರಹೊಂದಾಣಿಕೆ, ತಾಳ್ಮೆ, ಸಹಕಾರಗಳಿದ್ದರೆ ಕೌಟುಂಬಿಕ ಜೀವನ ಸಾಮರಸ್ಯದಿಂದ ಕೂಡಿರುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ.

## ಪರಿಸರದ ಕವಿತೆ

### ❋ ವಿಶ್ಲೇಷಣಾ ಟಿಪ್ಪಣಿ ಬರೆಯುವುದು

ಸುಂದರ ಪ್ರಕೃತಿ ಮತ್ತು ಜೀವಜಾಲದ ಕುರಿತಿರುವ ವೀಡಿಯೋ ತುಣಕನ್ನು ಪ್ರದರ್ಶಿಸುವುದು. **(youtube-https://youtu.be/VnfUVordn8w)** ಬಳಿಕ ವಿದ್ಯಾರ್ಥಿಗಳಲ್ಲಿ ಕೆಲವು ಪ್ರಶ್ನೆಗಳನ್ನು ಕೇಳುವುದು.

- ಈ ಪ್ರಕೃತಿಯು ಸುಂದರವಾಗಿ ಕಂಗೊಳಿಸಲು ಕಾರಣವೇನು?
- ಪ್ರಕೃತಿಯಲ್ಲಿ ಏನೆಲ್ಲಾ ಕಾಣಬಹುದು?
- ..........................
- ..........................

ಬಳಿಕ ಪ್ರಕೃತಿ ವಿನಾಶದ ಕುರಿತಿರುವ ಇನ್ನೊಂದು ವೀಡಿಯೋ ತುಣುಕೊಂದನ್ನು ಪ್ರದರ್ಶಿಸುವುದು. **(https://youtu.be/EEjrySj5kV8)** ಕೆಲವು ಪ್ರಶ್ನೆಗಳನ್ನು ಕೇಳುವುದು.

- ಪ್ರಕೃತಿ ಈ ದುಸ್ಥಿತಿಗೆ ಕಾರಣವೇನು?
- ಪ್ರಕೃತಿ ನಾಶಕ್ಕೆ ಮನುಷ್ಯ ಹೇಗೆ ಕಾರಣನಾಗಿದ್ದಾನೆ?
- ..........................
- ..........................

ಈ ಎರಡು ವೀಡಿಯೋ ತುಣುಕುಗಳನ್ನು ಕಂಡುಕೊಂಡ ವಿಚಾರಗಳ ಕುರಿತು ಚರ್ಚಿಸುವುದು. ಚರ್ಚೆಯಲ್ಲಿ ಮೂಡಿಬಂದ ವಿಚಾರಗಳನ್ನು ಕ್ರೋಢೀಕರಿಸಿ ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ಈ ವಿಚಾರಗಳನ್ನು ಒಳಗೊಳ್ಳಿಸಿ 'ಪರಿಸರದ ಕವಿತೆ' ಮತ್ತು 'ಅವಾಂತರ' ಕವಿತೆಗಳ ಆಧಾರದಲ್ಲಿ ಪ್ರಕೃತಿನಾಶ, ಪ್ರಾಕೃತಿಕ ವಿಕೋಪಗಳು, ಜನಸಂಖ್ಯಾ ಹೆಚ್ಚಳ, ಮನುಷ್ಯನ ದುರಾಸೆ, ರಾಸಾಯನಿಕ ಕೀಟನಾಶಕಗಳ ಬಳಕೆ, ಸುನಾಮಿ, ಅತಿವೃಷ್ಟಿ–ಇತ್ಯಾದಿಗಳು ಜೀವಜಾಲಗಳ ವಿನಾಶಕ್ಕೆ ಹೇಗೆ ಕಾರಣವಾಗುತ್ತದೆ? ಎಂಬುದರ ಕುರಿತು ವಿಶ್ಲೇಷಿಸಿ ಟಿಪ್ಪಣಿ ಬರೆಯಿರಿ.

### ◻ ವಿಶ್ಲೇಷಣಾ ಟಿಪ್ಪಣಿ ಹೀಗೂ ಬರೆಯಬಹುದಲ್ಲವೇ ?

ವೇಣುಗೋಪಾಲ ಕಾಸರಗೋಡು ಅವರ 'ಪರಿಸರದ ಕವಿತೆ' ನಗರದ ದುಸ್ತರ ಜೀವನವನ್ನು ನಮ್ಮ ಮುಂದಿಡುತ್ತದೆ. ಅಲ್ಲಿ ಸುಂದರವಾದ ಹೂಗಳಿವೆ, ನಳನಳಿಸುವ ಗಿಡ ಬಳ್ಳಿಗಳಿವೆ. ಹಸಿರು ಉದ್ಯಾನವಿದೆ, ಆದರೆ ಅವೆಲ್ಲವೂ ಕೃತಕ, ಪ್ಲಾಸ್ಟಿಕ್ ನಿರ್ಮಿತ, ಅಲ್ಲಿ ಆನೆ, ಕುದುರೆ, ಕರಡಿ, ಜಿಂಕೆ, ಘೇಂಡಾ ಮೃಗಗಳಿದ್ದರೂ ಅವುಗಳು ಉಸಿರಾಡುವುದಿಲ್ಲ ಎನ್ನುವಲ್ಲಿ ಅವುಗಳಿಗೆ ಜೀವವಿಲ್ಲವೆಂದು ಸೂಚಿಸುತ್ತದೆ. ಗಗನ ಚುಂಬಿ ಕಟ್ಟಡಗಳಿಂದ ತುಂಬಿದ ನಗರದ ಕೃತಕ ಪರಿಸರದಲ್ಲಿ ಮಕ್ಕಳ ಮನಸ್ಸಿಗೆ ನೀಡುವ ನಕ್ಷತ್ರಗಳು ಚಂದ್ರಮನನ್ನು ಕಾಣುವ ಭಾಗ್ಯ ಅವರಿಗಿಲ್ಲ. ವಾಯುಮಾಲಿನ್ಯ, ಶಬ್ದ ಮಾಲಿನ್ಯ ದಿನೇ ದಿನೇ ಹೆಚ್ಚುತ್ತಿದೆ. ನಗರೀಕರಣದ ಭರಾಟೆಯಲ್ಲಿ ಬಣ್ಣ ಬಣ್ಣದ ಹಕ್ಕಿಗಳು,

ಆನೆ, ಕುದುರೆ, ಕರಡಿ, ಜಿಂಕೆ ಮುಂತಾದ ವನ್ಯಜೀವಿಗಳು ನಾಶವಾಗಿವೆ ಎಂಬ ಕವಿಯ ಕಳವಳ ಈ ಕವನದಲ್ಲಿ ವ್ಯಕ್ತವಾಗುತ್ತದೆ.

ಅದೇ ರೀತಿ ಶ್ಯಾಮಲ ನವಕಾನದ 'ಅವಾಂತರ' ಕವನದಲ್ಲಿ ಪ್ರಕೃತಿಯ ಬಗೆಗಿನ ಕಾಳಜಿ ವ್ಯಕ್ತವಾಗುತ್ತದೆ. ಮಾನವ ಭೂಮಿಯ ಒಡಲನ್ನು ಅಗೆದು ಬರಿದು ಮಾಡುತ್ತಿದ್ದಾನೆ. ದಿನದಿಂದ ದಿನಕ್ಕೆ ಭೂಮಿಯ ಅಂತರ್ಜಲ ಮಟ್ಟ ಕುಸಿಯುತ್ತಿದೆ. ಇದರ ಪರಿಣಾಮದಿಂದ ಜಾಗತಿಕ ತಾಪಮಾನ ಹೆಚ್ಚುತ್ತಿದೆ. ಅರಣ್ಯನಾಶದಿಂದ ಇಡೀ ಪ್ರಾಣಿ–ಪಕ್ಷಿ ಸಂಕುಲಕ್ಕೆ ಸಂಚಕಾರ ಬಂದಿದೆ. ಜಲಮಾಲಿನ್ಯದಿಂದ ಜಲಚರಗಳಿಗೆ ಬದುಕಲು ಅಸಾಧ್ಯವಾಗಿದೆ. ಅತಿಯಾದ ಪ್ಲಾಸ್ಟಿಕ್ ಬಳಕೆಯಿಂದ ಓಝೋನ್ ಪದರು ತೂತಾಗಿದೆ. ಶಬ್ದ ಮಾಲಿನ್ಯ, ವಾಯುಮಾಲಿನ್ಯದಿಂದ ಭೂಮಿಯ ಮೇಲಿನ ಬದುಕು ದುಸ್ತರವಾಗಿದೆ. ಅರಣ್ಯನಾಶ, ನಗರೀಕರಣ, ರಾಸಾಯನಿಕ ಕೀಟನಾಶಕಗಳನ್ನು ಸಿಂಪಡಿಸಿ, ಪ್ರಕೃತಿ ಮತ್ತು ಜೀವಜಾಲಗಳ ನಾಶಕ್ಕೆ ಮನುಷ್ಯ ಕಾರಣನಾಗಿದ್ದಾನೆ.

***

ಘಟಕ 3

# ಶುಭೋದಯ

### ಘಟಕ – 3 : ಶುಭೋದಯ

# ರಾಷ್ಟ್ರವಂದನೆ

- **ಟಿಪ್ಪಣಿ ಬರೆಯುವುದು**

**'ಸ್ವಂತ ಮನೆಯ ಹೊಕ್ಕ ಬಿಳಿಯ ಖಳನ ಕಾಲನೊತ್ತುತ ಯಾತನೆಗಳ ತಾಳಿದಾಕೆ'**

ಕೊಟ್ಟಿರುವ ಸಾಲುಗಳ ಆಶಯವನ್ನು ವಿದ್ಯಾರ್ಥಿಗಳು ತಿಳಿದುಕೊಂಡಿದ್ದಾರೆ. ವಿದ್ಯಾರ್ಥಿಗಳು ಗುಂಪಿನಲ್ಲಿ ಚರ್ಚಿಸಿ ಟಿಪ್ಪಣಿಯಲ್ಲಿ ಯಾವೆಲ್ಲ ಅಂಶಗಳು ಒಳಗೊಂಡಿರಬೇಕೆಂಬುದನ್ನು ತೀರ್ಮಾನಿಸಲಿ. ಸ್ವಂತ ಅಭಿಪ್ರಾಯವನ್ನು ಸೇರಿಸಿ ಟಿಪ್ಪಣಿ ಬರೆದು ತರಗತಿಯಲ್ಲಿ ಮಂಡಿಸಲಿ.

**ಟಿಪ್ಪಣಿಯನ್ನು ಹೀಗೂ ಬರೆಯಬಹುದಲ್ಲವೇ ?**

ಭವ್ಯ ಇತಿಹಾಸ ಹೊಂದಿದ ಭಾರತಮಾತೆ ವಿಜೃಂಭಣೆಯಿಂದ ಮೆರೆದವಳು. ಬ್ರಿಟಿಷರ ದಾಸ್ಯದಿಂದ ಬಳಲುತ್ತಿದ್ದರೂ ಹೆಬ್ಬಾಗಿಲನ್ನು ತೆರೆದು ಸರ್ವರನ್ನೂ ಸ್ವಾಗತಿಸಿದ ಭಾರತಾಂಬೆಗೆ ಸರಿಸಾಟಿಯಾದವರು ಯಾರೂ ಇಲ್ಲ. ನಮ್ಮ ಬಾಳಿಗೆ ಶಾಂತಿ, ಸಮಾಧಾನವನ್ನು ನೀಡುವ ಭಾರತಮಾತೆಯೇ ನಮ್ಮ ಬದುಕಿನ ಆಧಾರಸ್ತಂಭ ; ತಂಪು ನೆರಳನ್ನು ನೀಡಿ ಸಲಹುವ ಹೆಮ್ಮರ.

ರಾಣಿಯಾಗಿ ಆಳಿ, ಗೃಹಿಣಿಯಾಗಿ ಬಾಳಿದ ಭಾರತಮಾತೆ ಜಾತಿ, ಮತ, ಭೇದವೆಣಿಸದೆ ಎಲ್ಲರನ್ನೂ ಪೋಷಿಸಿದಳು. ಆದರೆ ದುಷ್ಟರು ಬಂದು ತಮ್ಮ ಸೇವೆಯನ್ನು ಮಾಡಲು ಹೇಳಿದರೆ ಆಕೆ ಸಹಿಸುವುದಾದರೂ ಹೇಗೆ ? ಎಂತಹಾ ಕಠಿಣ ಸನ್ನಿವೇಶ ಒದಗಿಬಂದರೂ ವೀರನಾರಿಯಾಗಿ, ಸದ್ಗೃಹಿಣಿಯಾಗಿ ಬಾಳಿದ ಭಾರತಮಾತೆ ಮನೆ ಮನೆಯನ್ನು ಬೆಳಗಿದವಳಾದರೂ ಬ್ರಿಟಿಷರ ಸೇವೆಯನ್ನು ಮಾಡುತ್ತಾ, ಅವರಿಗೆ ಶಿರಬಾಗುತ್ತಾ ಅವರ ದುರಾಡಳಿತದಿಂದ ಬಹಳ ನೋವನ್ನುಂಡವಳು.

ಬ್ರಿಟಿಷರು ಸಂಪದ್ಭರಿತವಾಗಿದ್ದ ಭಾರತ ದೇಶದ ಮುತ್ತು, ರತ್ನ, ವಜ್ರ, ವೈಢೂರ್ಯಗಳೇ ಮೊದಲಾದ ಅಮೂಲ್ಯ ವಸ್ತುಗಳನ್ನೂ, ಸಂಬಾರಜಿನಸುಗಳನ್ನೂ ತಮ್ಮಿಷ್ಟದಂತೆ , ಇಷ್ಟಬಂದಲ್ಲಿಗೆ ಸಾಗಿಸಿದರು. ಭಾರತಾಂಬೆಯ ಮಡಿಲ ಮಕ್ಕಳನ್ನು ಗುಲಾಮರನ್ನಾಗಿ ಮಾಡಿ, ಚಿತ್ರಹಿಂಸೆ ನೀಡುತ್ತಾ ಹಗಲಿರುಳೆನ್ನದೆ ದುಡಿಸಿದರು. ಯಾವುದೇ ಪ್ರತಿಫಲ ಸಿಗದೆ ದುಡಿಯುವ ತನ್ನ ಕಂದಮ್ಮಗಳಿಗೆ ನೀಡುವ ಚಿತ್ರಹಿಂಸೆಯನ್ನು ಮೂಕಪ್ರೇಕ್ಷಕಿಯಾಗಿ ನೋಡಿದವಳು ಭಾರತ ಮಾತೆ. ಸ್ವಾತಂತ್ರ್ಯ ಹೋರಾಟಗಾರರ ಬಲಿದಾನಗಳನ್ನು ಕಣ್ಣಾರೆ ಕಂಡು ಕಣ್ಣೀರು ಸುರಿಸಿದಾಕೆ. ಇವೆಲ್ಲವುಗಳಿಂದ ಭಾರತಮಾತೆಯು ಹಲವು ರೀತಿಯಲ್ಲಿ ನೋವನ್ನುಂಡವಳೆಂಬುದನ್ನು ನಾವು ತಿಳಿದುಕೊಳ್ಳುತ್ತೇವೆ.

# ಶುಭ ಹಾರೈಕೆ

## ▫ ಲೇಖನ ಬರೆಯುವುದು

- ವಿದ್ಯಾರ್ಥಿಗಳನ್ನು ಗುಂಪುಗಳನ್ನಾಗಿ ಮಾಡುವುದು.
- 'ಬಾಳಸಂಜೆ' ಕವನವನ್ನು ಮೌನವಾಗಿ ಓದಲು ಹೇಳುವುದು.
- ವಿದ್ಯಾರ್ಥಿಗಳು ಗುಂಪುಗಳಲ್ಲಿ ಚರ್ಚಿಸಿ ಬರೆದು ಮಂಡಿಸುವುದು.

ವಿದ್ಯಾರ್ಥಿಗಳ ಮಂಡನೆಯಲ್ಲಿ ಈ ಕೆಳಗಿನ ಅಂಶಗಳು ಮೂಡಿ ಬಂದಿರಬಹುದು.

- ಮಗ ಮತ್ತು ಮಗಳು ದೂರದ ಮುಂಬೈ ಹಾಗೂ ಕಲ್ಕತ್ತೆಯಲ್ಲಿ ವಾಸಿಸುತ್ತಿರುವುದು.
- ಹಳ್ಳಿಯಲ್ಲಿ ವೃದ್ಧ ತಂದೆ ತಾಯಂದಿರು ವಾಸಿಸುತ್ತಿರುವುದು.
- ಮಕ್ಕಳ ನಿರೀಕ್ಷೆಯಲ್ಲಿ ಹೆತ್ತವರಿದ್ದರೆ ಕೇವಲ ಪತ್ರ ಹಾಗೂ ದೂರವಾಣಿಗಳಿಗೆ ಮಾತ್ರ ಸೀಮಿತವಾದ ಮಕ್ಕಳು.
-
-

ಇತ್ಯಾದಿ ಅಂಶಗಳು.

' ಶುಭ ಹಾರೈಕೆ' ಕತೆಯ ಪ್ರಧಾನ ವಿಷಯಗಳನ್ನು ಬರೆದು ಮಂಡಿಸುವುದು.

ಮಂಡನೆಯಲ್ಲಿ ಈ ಕೆಳಗಿನ ಅಂಶಗಳು ವ್ಯಕ್ತವಾಗಿರಬಹುದು.

- ಮಕ್ಕಳ ಆಗಮನವನ್ನು ನಿರೀಕ್ಷಿಸುವ ತಾಯಿ.
- ಮಕ್ಕಳು ಬಾರದಿದ್ದರೂ ಅವರ ಶುಭಾಶಯ ಪತ್ರಗಳಾದರೂ ಬರಬಹುದೆಂಬ ನಿರೀಕ್ಷೆಯಲ್ಲಿರುವ ವೃದ್ಧ ತಾಯಿ.
- ಮಕ್ಕಳು ಶುಭಾಶಯ ಪತ್ರವನ್ನು ಕಳುಹಿಸಲು ಮರೆತಾಗ ಹಳೆಯ ಶುಭಾಶಯ ಪತ್ರಗಳನ್ನಿಟ್ಟುಕೊಂಡು ನಿರಾಶೆಯಿಂದ ಏಕಾಂತದ ಹಾಡನ್ನು ಹಾಡುವ ವೃದ್ಧೆ.
-
-

ಇತ್ಯಾದಿ ಅಂಶಗಳು.

ವಿದ್ಯಾರ್ಥಿಗಳು ಹೇಳದೆ ಉಳಿದಿರುವ ವಿಚಾರಗಳನ್ನು ಅಧ್ಯಾಪಕರು ಹೇಳುವುದು.

- ಎಲ್ಲಾ ವಿಚಾರಗಳನ್ನು ಕ್ರೋಡೀಕರಿಸಿ, ತುಲನೆ ಮಾಡಿ, ವಿಶ್ಲೇಷಿಸಿ ಲೇಖನ ತಯಾರಿಸುವುದು.

  ಲೇಖನ ಹೀಗೂ ಇರಬಹುದಲ್ಲವೇ?

'ನಾ.ಡಿ. ಸೋಜ'ರು ಬರೆದ 'ಶುಭ ಹಾರೈಕೆಗಳು' ಪಾಠದ ಇನಾಸಜ್ಜಿ ದಂಪತಿಗಳು ಮಾತೃವಾತ್ಸಲ್ಯ ಮತ್ತು ಹೃದಯವೈಶಾಲ್ಯವನ್ನು ಮೆರೆದವರು. ವಿದ್ಯಾಭ್ಯಾಸ ಮುಗಿದು ದೂರದ ಊರುಗಳಲ್ಲಿ ದುಡಿಯುತ್ತಿದ್ದ ಮಕ್ಕಳು ಆರಂಭದಲ್ಲಿ ಹಣ ಕಳುಹಿಸುತ್ತಿದ್ದರು, ಆಗೊಮ್ಮೆ ಈಗೊಮ್ಮೆ ಮನೆಗೆ ಬರುತ್ತಿದ್ದರು. ಕ್ರಮೇಣ ಅದು ನಿಂತು ಹೋಗಿ ಕ್ರಿಸ್‌ಮಸ್ ಗ್ರೀಟಿಂಗ್ ಕಾರ್ಡ್ ಕಳುಹಿಸುವುದರಲ್ಲಿ ಕೊನೆಗೊಂಡಿತು. ಆಶಾವಾದಿಯಾದ ಇನಾಸಜ್ಜಿ ಆ ಕಾರ್ಡ್‌ಗಾಗಿ ದಿನದಿನವೂ ಕಾತರಿಸುತ್ತಿದ್ದಳು. ಗ್ರೀಟಿಂಗ್ ಕಾರ್ಡು ಬಾರದೇ ಇದ್ದಾಗ ಮೊದಲು ಕಳುಹಿಸಿದ ಕಾರ್ಡುಗಳನ್ನು ತೆಗೆದು, ಎಲ್ಲರಿಗೂ ಶುಭ ಹಾರೈಸುತ್ತಾ ರೂಢಿಯಂತೆ ಸಂಭ್ರಮಿಸುತ್ತಿದ್ದಾಳೆ. ಇಲ್ಲಿ ಇನಾಸಜ್ಜಿ ನೋವನ್ನು ಮರೆತ ಉತ್ತಮ ತಾಯಿಯಾಗಿ  ಕಾಣುತ್ತಾಳೆ.

ಸವಿತಾನಾಗಭೂಷಣರು ಬರೆದ 'ಬಾಳಸಂಜೆ' ಕವನದಲ್ಲಿ ಪಟ್ಟಣದಲ್ಲಿರುವ ತಮ್ಮ ಮಕ್ಕಳು ಇಂದಲ್ಲದಿದ್ದರೆ ನಾಳೆ ಬರಬಹುದೆಂದು ನಿರೀಕ್ಷಿಸುತ್ತಾ ಹಳ್ಳಿಯಲ್ಲಿ ಬದುಕುತ್ತಿರುವ ಹೆತ್ತವರ ಚಿತ್ರಣವಿದೆ. ಮಕ್ಕಳು ತಾವಿರುವಲ್ಲಿಂದಲೇ ಪತ್ರಗಳ ಮೂಲಕ ಹೆತ್ತವರನ್ನು ವಿಚಾರಿಸುತ್ತಾರೆ. ಅಲ್ಲದೆ ಮನಿಯಾರ್ಡರ್ ಕಳುಹಿಸುತ್ತಾ 'ತೋಟಗಳಿಗೆ ನೀರುಣಿಸಿ' ಎಂದು ಸೂಚಿಸುತ್ತಾರೆ. ಹೆತ್ತವರು ಬೇಡ ; ಅವರ ಆಸ್ತಿ ಬೇಕೆನ್ನುವ ಸ್ವಾರ್ಥ ಮನೋಭಾವ ಇಲ್ಲಿ ಗೋಚರಿಸುತ್ತದೆ. ಇಂದು ಯುವ ಜನತೆ ತಾವು, ತಮ್ಮ ಮಡದಿ, ಮಕ್ಕಳು ಮಾತ್ರವಿರುವ ಪುಟ್ಟ ಕುಟುಂಬವನ್ನು ಬಯಸುತ್ತಾರೆ. ತಮ್ಮ ಬಾಲ್ಯದಲ್ಲಿ ಲಾಲನೆ–ಪಾಲನೆ ಮಾಡಿ ಸಾಕಿ ಸಲಹಿದ ಹೆತ್ತವರನ್ನು ವೃದ್ಧಾಪ್ಯದಲ್ಲಿ ನೋಡಿಕೊಳ್ಳುವುದು ತಮ್ಮ ಕರ್ತವ್ಯವೆಂಬ ಪ್ರಜ್ಞೆ ಅವರಲ್ಲಿರಬೇಕು. ತಮ್ಮ ಜೀವನವನ್ನು ಉತ್ತಮವಾಗಿ ರೂಪಿಸುವುದಕ್ಕೆ ಅಗತ್ಯವಾದ ಆರ್ಥಿಕ ಭದ್ರತೆಗಾಗಿ ದುಡಿಯುವುದೊಂದೇ ಗುರಿಯಾಗಿರುವ ಅವರು ತಾವು ಈ ಹಂತಕ್ಕೆ ತಲುಪುವುದಕ್ಕೆ ಹೆತ್ತವರೇ ಕಾರಣಕರ್ತರೆಂಬುದನ್ನು ಸದಾ ಜ್ಞಾಪಿಸಿಕೊಳ್ಳಬೇಕು. ತಮ್ಮ ಜೀವನವನ್ನು ಮಕ್ಕಳಿಗಾಗಿ ತೇದ ಹೆತ್ತವರು ಕೊನೆಗಾಲದಲ್ಲಿ ಅನಾಥರಾಗಿ ಕಾಲಕಳೆಯುವುದಕ್ಕೆ ಅವಕಾಶ ಕಲ್ಪಿಸಬಾರದು.

ಎರಡು ಕೃತಿಗಳಲ್ಲೂ ಹೆತ್ತವರು ಆಶಾವಾದಿಗಳಾಗಿ ಕಾಣುತ್ತಾರೆ. ಹೆತ್ತವರನ್ನು ನೋಡಿಕೊಳ್ಳುವ ತಮ್ಮ ಕರ್ತವ್ಯವನ್ನು ಮಕ್ಕಳು ಮರೆತಿದ್ದಾರೆ.

***